ಕರ್ನಾಟಕ ಸರ್ಕಾರ

ಜಿಲ್ಲಾಡಳಿತ ದಾವಣಗೆರೆ

ಜಿಲ್ಲಾ ಪಂಚಾಯತ್ ದಾವಣಗೆರೆ

## ಉಪನಿರ್ದೇಶಕರ ಕಚೇರಿ,
## ಸಾರ್ವಜನಿಕ ಶಿಕ್ಷಣ ಇಲಾಖೆ
## ದಾವಣಗೆರೆ ಜಿಲ್ಲೆ

# "ಆಶಯ -2021-22"

### ಎಸ್.ಎಸ್.ಎಲ್.ಸಿ. ಸಮಾಜವಿಜ್ಞಾನ ಕಲಿಕಾ ಮಾರ್ಗದರ್ಶಿ

## ಕನ್ನಡ ಮಾಧ್ಯಮ

# 1

ಕರ್ನಾಟಕ ಸರ್ಕಾರ

ಜಿಲ್ಲಾಡಳಿತ ದಾವಣಗೆರೆ ಜಿಲ್ಲಾ ಪಂಚಾಯತ್ ದಾವಣಗೆರೆ

# ಉಪನಿರ್ದೇಶಕರ ಕಚೇರಿ,

## ಸಾರ್ವಜನಿಕ ಶಿಕ್ಷಣ ಇಲಾಖೆ

## ದಾವಣಗೆರೆ ಜಿಲ್ಲೆ

# "ಆಶಯ -2021-22"

## ಎಸ್.ಎಸ್.ಎಲ್.ಸಿ. ಸಮಾಜವಿಜ್ಞಾನ ಕಲಿಕಾ ಮಾರ್ಗದರ್ಶಿ

## ಕನ್ನಡ ಮಾಧ್ಯಮ

# 1

ಮಾರ್ಗದರ್ಶನ

**ಡಾ॥ ವಿಶಾಲ್ ಆರ್.** ಭಾ.ಆ.ಸೇ.
ಮಾನ್ಯ ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಡಾ॥ ವಿಜಯ ಮಹಂತೇಶ್ ಧಾನಮ್ಮನವರ್ ಭಾ.ಆ.ಸೇ.
ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು
ಜಿಲ್ಲಾ ಪಂಚಾಯತ್ ದಾವಣಗೆರೆ

ಶ್ರೀ ಮಹಾಂತೇಶ್ ಬಿಳಗಿ ಭಾ.ಆ.ಸೇ.
ಜಿಲ್ಲಾಧಿಕಾರಿಗಳು
ದಾವಣಗೆರೆ

ಶ್ರೀ ಕೃಷ್ಣಾಜಿ ಎಸ್. ಕರಿಚಣ್ಣನವರ್ ಕೆ.ಇ.ಎಸ್.
ನಿರ್ದೇಶಕರು (ಪ್ರೌಢಶಿಕ್ಷಣ)
ಆಯುಕ್ತರ ಕಚೇರಿ ಬೆಂಗಳೂರು

ಶ್ರೀ ಪ್ರಸನ್ನ ಕುಮಾರ್ ಎಂ.ಎಸ್. ಕೆ.ಇ.ಎಸ್.
ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
ಆಯುಕ್ತರ ಕಚೇರಿ ಬೆಂಗಳೂರು

## ಉಪನಿರ್ದೇಶಕರ ಕಚೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ದಾವಣಗೆರೆ ಜಿಲ್ಲೆ

# ಪರಿಕಲ್ಪನೆ

**ಶ್ರೀ ಮಂಜುನಾಥ್ ಹೆಚ್.** ಕೆ.ಇ.ಎಸ್.

**ಪದನಿಮಿತ್ತ ಸಹ ನಿರ್ದೇಶಕರು ಮತ್ತು ಪ್ರಾಂಶುಪಾಲರು**
**ಸಿಟಿಇ ಚಿತ್ರದುರ್ಗ**

**ಶ್ರೀ ಲಿಂಗರಾಜು ಹೆಚ್. ಕೆ.** ಕೆ.ಇ.ಎಸ್.

**ಪ್ರಾಂಶುಪಾಲರು ಮತ್ತು ಪದನಿಮಿತ್ತ**
**ಉಪನಿರ್ದೇಶಕರು (ಅಭಿವೃದ್ಧಿ)**
**ಡಯಟ್ ದಾವಣಗೆರೆ**

**ಶ್ರೀ ಜಿ.ಆರ್. ತಿಪ್ಪೇಶಪ್ಪ** ಕೆ.ಇ.ಎಸ್.

**ಉಪನಿರ್ದೇಶಕರು (ಆಡಳಿತ)**
**ಸಾರ್ವಜನಿಕ ಶಿಕ್ಷಣ ಇಲಾಖೆ**
**ದಾವಣಗೆರೆ**

# ಸಲಹೆ

ಶ್ರೀ ನಾಗರಾಜ್ ಸಿ. ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರ ಕಚೇರಿ ದಾವಣಗೆರೆ
ಶ್ರೀ ರವಿ ಎಲ್. ಉಪಯೋಜನ ಸಮನ್ವಯಾಧಿಕಾರಿಗಳು ಎಸ್.ಎಸ್.ಕೆ. ದಾವಣಗೆರೆ
ಶ್ರೀ ಮಂಜುನಾಥಸ್ವಾಮಿ ಎಂ. ಉಪಯೋಜನ ಸಮನ್ವಯಾಧಿಕಾರಿಗಳು ಎಸ್.ಎಸ್.ಕೆ. ದಾವಣಗೆರೆ
ಶ್ರೀ ಮಂಜುನಾಥ ಕೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಚನ್ನಗಿರಿ ತಾಲ್ಲೂಕು
ಶ್ರೀ ಅಂಬಣ್ಣ ಟಿ. ಕ್ಷೇತ್ರ ಶಿಕ್ಷಣಾಧಿಕಾರಿಗಳು., ದಾವಣಗೆರೆ ಉತ್ತರ ವಲಯ
ಶ್ರೀ ನಿರಂಜನ ಮೂರ್ತಿ ಎಂ. ಕ್ಷೇತ್ರ ಶಿಕ್ಷಣಾಧಿಕಾರಿಗಳು., ದಾವಣಗೆರೆ ದಕ್ಷಿಣ ವಲಯ
ಶ್ರೀ ಸಿದ್ಧಪ್ಪ ಬಿ.ಸಿ. ಕ್ಷೇತ್ರ ಶಿಕ್ಷಣಾಧಿಕಾರಿಗಳು., ಹರಿಹರ ತಾಲ್ಲೂಕು
ಶ್ರೀ ರಾಜೀವ್ ಜಿ.ಇ. ಕ್ಷೇತ್ರ ಶಿಕ್ಷಣಾಧಿಕಾರಿಗಳು., ಹೊನ್ನಾಳಿ ತಾಲ್ಲೂಕು
ಶ್ರೀಮತಿ ಉಮಾದೇವಿ ಬಿ. ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಗಳೂರು ತಾಲ್ಲೂಕು

# ಸಮನ್ವಯ

ಶ್ರೀಮತಿ ಶಶಿಕಲಾ ಎಂ. ವಿಷಯ ಪರಿವೀಕ್ಷಕರು, ಉಪನಿರ್ದೇಶಕರ ಕಚೇರಿ, ದಾವಣಗೆರೆ

# ಸಹಕಾರ

ಜಿಲ್ಲಾ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಂಘ, ದಾವಣಗೆರೆ
ಜಿಲ್ಲಾ ಪ್ರೌಢಶಾಲಾ ಸಹಶಿಕ್ಷಕರ ಸಂಘ, ದಾವಣಗೆರೆ

# ಸಂಪನ್ಮೂಲ ತಂಡದ ಪರಿಚಯ

## ಸಮಾಜವಿಜ್ಞಾನ ಎಸ್.ಟಿ.ಎಫ್.ತಂಡ ದಾವಣಗೆರೆ

| ಕ್ರ. ಸಂ. | ಶಿಕ್ಷಕರ ಹೆಸರು | ಶಾಲೆಯ ಹೆಸರು |
|---|---|---|
| 1 | **ಶ್ರೀ ರಾಮಚಂದ್ರ ಕೆ.ಎಸ್.** | ಸರ್ಕಾರಿ ಪ್ರೌಢಶಾಲೆ ಟಿ.ಗೋಪಗೊಂಡನಹಳ್ಳಿ ನ್ಯಾಮತಿ ತಾ. |
| 2 | **ಶ್ರೀ ಪ್ರಸನ್ನ ಎಸ್.ಇ.** | ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ಹೊನ್ನಾಳಿ |
| 3 | **ಶ್ರೀ ರಮೇಶ್ ಎಂ.** | ಸರ್ಕಾರಿ ಪ್ರೌಢಶಾಲೆ ಗುಡ್ಡದ ಕುಮಾರನಹಳ್ಳಿ ಚನ್ನಗಿರಿ ತಾ. |
| 4 | **ಶ್ರೀ ಬಸವಲಿಂಗಪ್ಪ ಹುಗ್ಗಿ** | ಶ್ರೀ ಮಹಾರುದ್ರಸ್ವಾಮಿ ಪ್ರೌಢಶಾಲೆ ನಲ್ಲುದುರೆ–ಗೋಮಾಳ, ಚನ್ನಗಿರಿ ತಾ. |
| 5 | **ಶ್ರೀ ಸುರೇಶ್ ನಾಯಕ ಟಿ.ಎಂ.** | ಸರ್ಕಾರಿ ಪ್ರೌಢಶಾಲೆ ಮೆಳ್ಳೆಕಟ್ಟೆ ದಾವಣಗೆರೆ ಉತ್ತರ ತಾ. |
| 6. | **ಶ್ರೀ ಮಲ್ಲಿಕಾರ್ಜುನ ಬಿ.ಸಿ.** | ಸರ್ಕಾರಿ ಪ್ರೌಢಶಾಲೆ ಆವರಗೊಳ್ಳ ದಾವಣಗೆರೆ ಉತ್ತರ |
| 7 | **ಶ್ರೀ ಶೇಕ್ ಅಹಮದ್** | ಕರ್ನಾಟಕ ಪಬ್ಲಿಕ್ ಶಾಲೆ ಕುಕ್ಕುವಾಡ ದಾವಣಗೆರೆ ದಕ್ಷಿಣ |
| 8 | **ಶ್ರೀ ನಾಗರಾಜ್ ವಿ.ಎಸ್.** | ಸರ್ಕಾರಿ ಪ್ರೌಢಶಾಲೆ ಗುತ್ತೂರು ಹರಿಹರ ತಾ. |
| 9 | **ಶ್ರೀ ಗೋವಿಂದನಾಯ್ಕ ಆರ್.** | ಶ್ರೀ ಮೈಲಾರ ಲಿಂಗೇಶ್ವರ ಪ್ರೌಢಶಾಲೆ ದೇವರಬೆಳಕೆರೆ ಹರಿಹರ ತಾ. |
| 10 | **ಶ್ರೀ ಪ್ರದೀಪ್ ಎಸ್.ಎನ್.** | ಸರ್ಕಾರಿ ಪ್ರೌಢಶಾಲೆ ಗೌರೀಪುರ ಜಗಳೂರು ತಾ. |
| 11 | **ಶ್ರೀ ವಿಶ್ವನಾಥ್** | ಸರ್ಕಾರಿ ಪ್ರೌಢಶಾಲೆ ದಿದ್ದಿಗಿ ಜಗಳೂರು ತಾ. |
| 12 | **ಶ್ರೀ ಶ್ರೀಕಾಂತ್ ಕೆ.** | ಸರ್ಕಾರಿ ಪ್ರೌಢಶಾಲೆ ಹೆಚ್. ಬಸವಾಪುರ ದಾವಣಗೆರೆ ದಕ್ಷಿಣ ವಲಯ |
| 13 | **ಶ್ರೀಮತಿ ಶುಭ ಎಂ.ಪಾಟೀಲ್** | ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ಕೊಂಡಜ್ಜಿ ಹರಿಹರ ತಾ. |

## 1. ಭಾರತಕ್ಕೆ ಯುರೋಪಿಯನ್ನರ ಆಗಮನ

**1 ಮಧ್ಯಕಾಲದಲ್ಲಿ ಭಾರತ ಮತ್ತು ಯುರೋಪ್ ನಡುವೆ ವ್ಯಾಪಾರ ಹೇಗೆ ನಡೆಯುತ್ತಿತ್ತು?**

* ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಕಾನ್ ಸ್ಟಾಂಟಿನೋಪಲ್ ನಗರಕ್ಕೆ ತಲುಪಿಸುತ್ತಿದ್ದರು
* ಕಾನ್ ಸ್ಟಾಂಟಿನೋಪಲ್ ನಗರದಿಂದ ಇಟಲಿ ವರ್ತಕರು ಅವುಗಳನ್ನು ಕೊಂಡು ಯುರೋಪಿನ ದೇಶಗಳಲ್ಲಿ ಮಾರುತ್ತಿದ್ದರು

**2. ಯಾವ ಹೊಸ ವೈಜ್ಞಾನಿಕ ಆವಿಷ್ಕಾರಗಳು ಹೊಸ ಜಲಮಾರ್ಗ ಕಂಡು ಹಿಡಿಯಲು ನಾವಿಕರ ನೆರವಿಗೆ ಬಂದವು?**

* ದಿಕ್ಸೂಚಿ * ಆಸ್ಟ್ರೋಲೋಬ್ * ಸಿಡಿಮದ್ದು

**3. ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯಲು ಕಾರಣವಾದ ಅಂಶಗಳು ಯಾವುವು?**

* ಆಟೋಮಾನ್ ಟರ್ಕರು ಕಾನ್ ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡದ್ದು
* ಟರ್ಕರು ವ್ಯಾಪಾರದ ಮೇಲೆ ಹೆಚ್ಚಿನ ತೆರಿಗೆಯನ್ನು ವಿಧಿಸಿದ್ದು
* ಸ್ಪೇನ್ ಮತ್ತು ಪೋರ್ಚುಗಲ್ ದೇಶಗಳು ಇಟಲಿ ವರ್ತಕರ ಏಕಸ್ವಾಮ್ಯ ಮುರಿಯಲು ಸಾಹಸಿ ನಾವಿಕರನ್ನು ಪ್ರೋತ್ಸಾಹಿಸಿದ್ದು
* ದಿಕ್ಸೂಚಿ,ಆಸ್ಟ್ರೋಲೋಬ್,ಸಿಡಿಮದ್ದು ಮುಂತಾದ ಹೊಸ ವೈಜ್ಞಾನಿಕ ಉಪಕರಣಗಳ ಆವಿಷ್ಕಾರ

**4. ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಯುರೋಪಿಯನ್ನರನ್ನು ಹೆಸರಿಸಿ.**

* ಪೋರ್ಚುಗೀಸರು * ಡಚ್ಚರು * ಇಂಗ್ಲಿಷರು * ಫ್ರೇಂಚರು

**5. ಬಕ್ಸಾರ್ ಕದನಕ್ಕೆ ಕಾರಣಗಳನ್ನು ತಿಳಿಸಿ.**

* ಬಂಗಾಳದ ನವಾನ ಮೀರ್ ಖಾಸಿಂ ತನ್ನನ್ನು ಸ್ವತಂತ್ರ ರಾಜ ಎಂದು ಭಾವಿಸಿದನು
* ಬಂಗಾಳದ ಎಲ್ಲಾ ವ್ಯಾಪಾರವನ್ನು ಸುಂಕಮುಕ್ತ ಎಂದು ಘೋಷಿಸಿದನು
* ಭಾರತೀಯ ಮತ್ತು ಬ್ರಿಟಿಷ್ ವ್ಯಾಪಾರಿಗಳ ನಡುವೆ ವ್ಯಾಪಾರದಲ್ಲಿ ಪೈಪೋಟಿ
* ಬ್ರಿಟಿಷರ ವ್ಯಾಪಾರವು ನಷ್ಟದಲ್ಲಿ ನಡೆಯಿತು

**6. ಬಕ್ಸಾರ್ ಕದನದ ಪರಿಣಾಮಗಳನ್ನು ತಿಳಿಸಿರಿ**

* ಮೊಘಲ್ ದೊರೆ ಎರಡನೇ ಷಾ ಆಲಂ ಈಸ್ಟ್ ಇಂಡಿಯಾ ಕಂಪನಿಗೆ ದಿವಾನಿ ಹಕ್ಕನ್ನು ನೀಡಿದನು
* ಬ್ರಿಟಿಷರು ಬಂಗಾಳ,ಬಿಹಾರ ಮತ್ತು ಒರಿಸ್ಸಾದ ನಿಜವಾದ ಒಡೆಯರು ಆದರು
* ಔದ್ ನವಾಬ ಷೂಜ–ಉದ್–ದೌಲ್ ಬ್ರಿಟಿಷ್ ಕಂಪನಿಗೆ ಯುದ್ಧ ನಷ್ಟ ಪರಿಹಾರ ಕೊಡಬೇಕಾಯಿತು
* ಬಂಗಾಳದ ಪೂರ್ಣ ಆಡಳಿತವನ್ನು ಕಂಪನಿ ವಹಿಸಿಕೊಂಡಿತು

**7. ದ್ವಿ–ಪ್ರಭುತ್ವ ಪದ್ಧತಿಯನ್ನು ವಿವರಿಸಿ?**

* ಈ ಪದ್ಧತಿಯನ್ನು ಸಾ.ಶ.1765ರಲ್ಲಿ ರಾಬರ್ಟ್ ಕ್ಲೈವ್ ಬಂಗಾಳ ಪ್ರಾಂತ್ಯದಲ್ಲಿ ಜಾರಿಗೆ ತಂದನು
* ಬ್ರಿಟಿಷರು ಭೂಕಂದಾಯ ವಸೂಲಿ ಮಾಡುವ ಹಕ್ಕನ್ನು ಪಡೆದರು
* ಬಂಗಾಳದ ನವಾಬನಿಗೆ ರಾಜ್ಯದ ಆಡಳಿತ, ನ್ಯಾಯ ತೀರ್ಮಾನ ಮುಂತಾದ ಆಡಳಿತಾತ್ಮಕ ಕಾರ್ಯಗಳನ್ನು ವಹಿಸಿಕೊಡಲಾಯಿತು.

## 2. ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

**1. ಶ್ರೀರಂಗಪಟ್ಟಣ ಒಪ್ಪಂದ ಟಿಪ್ಪುವಿಗೆ ಅನಿವಾರ್ಯವಾಗಿತ್ತು. ಏಕೆ?**

* ಬಿಟಿಷರು ನಿಜಾಮ ಮತ್ತು ಮರಾಠರೊಂದಿಗೆ ಮಾಡಿಕೊಂಡ ಒಪ್ಪಂದ.
* ಬಿಟಿಷರು ಟಿಪ್ಪುವಿನ ಒಂದೊಂದೇ ಕೋಟೆಗಳನ್ನು ವಶಪಡಿಸಿಕೊಂಡರು.
* 1792 ರಲ್ಲಿ ಬ್ರಿಟಿಷರು ಶ್ರೀರಂಗಪಟ್ಟಣ ಕೋಟೆ ಮೇಲೆ ಮುತ್ತಿಗೆ ಹಾಕಿದರು.
* ಟಿಪ್ಪುವಿಗೆ ಆಕ್ರಮಣವನ್ನು ಎದುರಿಸಲಾಗಲಿಲ್ಲ.
* ತಕ್ಷಣದ ಆಕ್ರಮಣವನ್ನು ತಡೆಯಲು ಬ್ರಿಟಿಷರೊಂದಿಗೆ ಒಪ್ಪಂದ ಅನಿವಾರ್ಯವಾಗಿತ್ತು.
* 1792 ರಲ್ಲಿ ಟಿಪ್ಪು ಬ್ರಿಟಿಷರೊಂದಿಗೆ ಅವಮಾನಕರ ಶ್ರೀರಂಗಪಟ್ಟಣ ಒಪ್ಪಂದ ಮಾಡಿಕೊಂಡನು.

**2. ಶ್ರೀರಂಗಪಟ್ಟಣ ಒಪ್ಪಂದದ ಕರಾರುಗಳಾವವು?**

* 1792 ರಲ್ಲಿ ಬ್ರಿಟಿಷರು ಮತ್ತು ಟಿಪ್ಪುವಿನ ನಡುವೆ ಶ್ರೀರಂಗಪಟ್ಟಣ ಒಪ್ಪಂದ ನಡೆಯಿತು.
* ಈ ಒಪ್ಪಂದ ಟಿಪ್ಪುವಿಗೆ ಅತ್ಯಂತ ಅವಮಾನ ಕರವಾಗಿತ್ತು.
* ಟಿಪ್ಪು ತನ್ನ ಅರ್ಧರಾಜ್ಯವನ್ನು ಶತ್ರುಗಳಿಗೆ ಬಿಟ್ಟುಕೊಡುವುದು.
* ಯುದ್ಧ ನಷ್ಟ ಪರಿಹಾರವಾಗಿ ಮೂರು ಕೋಟಿ ರೂಪಾಯಿಗಳನ್ನು ಕೊಡುವುದು.
* ಯುದ್ಧ ನಷ್ಟ ಕೊಡುವವರೆಗೂ ತನ್ನ ಇಬ್ಬರು ಗಂಡು ಮಕ್ಕಳನ್ನು ಒತ್ತೆಯಾಳಾಗಿ ಇಡುವುದು.
* ಯುದ್ಧ ಕೈದಿಗಳನ್ನು ಬಿಡುಗಡೆಗೊಳಿಸುವುದು.

**3. ಸ್ವಾತಂತ್ರ ಹೋರಾಟದಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ಪಾತ್ರವನ್ನು ಕುರಿತು ವಿವರಿಸಿ.**

* ಸ್ವತಂತ್ರ ಹೋರಾಟದಲ್ಲಿ ಕಿತ್ತೂರಾಣಿ ಚೆನ್ನಮ್ಮ ಹೋರಾಟ ಸ್ಮರಣೀಯ ವಾಗಿತ್ತು.
* ದತ್ತು ಪುತ್ರರಿಗೆ ಹಕ್ಕಿಲ್ಲ ಎಂಬ ನೀತಿಯನ್ನು ವಿರೋಧಿಸಿ ಚೆನ್ನಮ್ಮಳು ಹಿಡಿದಿದ್ದಳು.
* ಬ್ರಿಟಿಷ್ ಅಧಿಕಾರಿ ಥ್ಯಾಕರೆ ಕಿತ್ತೂರನ್ನು ವಶಪಡಿಸಿಕೊಳ್ಳಲು ಮುಂದಾದನು.
* ಕಿತ್ತೂರಿನ ಖಜಾನೆ, ಕೋಟೆಗಳನ್ನು ತನ್ನ ವಶಕ್ಕೆ ಪಡೆದುಕೊಂಡನು.
* ಆಗ ರಾಣಿ ಚೆನ್ನಮ್ಮಳು ಮತ್ತು ಕಿತ್ತೂರಿನ ಸೈನಿಕರು ಬ್ರಿಟಿಷರೊಂದಿಗೆ ವೀರಾವೇಶದಿಂದ ಮಾಡಿದರು
* ಕಿತ್ತೂರಿನ ಸೈನಿಕರು ಥ್ಯಾಕರೆಯನ್ನು ಯುದ್ಧದಲ್ಲಿ ಕೊಂದುಹಾಕಿದರು.
* ಮುಂದೆ ನಡೆದ ಘೋರಯುದ್ಧದಲ್ಲಿ ಕಿತ್ತೂರಿಗೆ ಸೋಲಾಯಿತು. ರಾಣಿ ಚೆನ್ನಮ್ಮಳನ್ನು ಬಂಧನದಲ್ಲಿ ಇರಿಸಲಾಯಿತು, ಹೀಗೆ ಸ್ವತಂತ್ರ ಹೋರಾಟದಲ್ಲಿ ಕಿತ್ತೂರಾಣಿ ಚೆನ್ನಮ್ಮ ಆದರ್ಶಪ್ರಾಯಳಾಗಿದ್ದಾಳೆ.

**4. ಕಿತ್ತೂರಿನ ಸ್ವಾತಂತ್ರ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣನ ಪಾತ್ರವೇನು?**

* ಕಿತ್ತೂರಿನ ಹುಲಿ ಎಂದೇ ಸಂಗೊಳ್ಳಿ ರಾಯಣ್ಣ ಪ್ರಸಿದ್ಧನಾಗಿದ್ದಾನೆ
* ಸೈನಿಕರನ್ನು ಸಂಘಟಿಸುತ್ತ ಕಿತ್ತೂರಿನ ಸ್ವತಂತ್ರಕ್ಕಾಗಿ ಹೋರಾಡಿದನು.
* ಗುಪ್ತ ಸಭೆಗಳನ್ನು ನಡೆಸುವ ಮೂಲಕ ಹೋರಾಟದ ಯೋಜನೆ ರೂಪಿಸಿದನು.
* ಬ್ರಿಟಿಷರ ಆಡಳಿತ ಕಚೇರಿ ಮತ್ತು ಖಜಾನೆಗಳನ್ನು ಲೂಟಿ ಮಾಡಿದನು.
* ಬ್ರಿಟಿಷರ ವಿರುದ್ಧ ಹೋರಾಡಲು ಅನೇಕ ಪಾಳೆಗಾರರ ಸಹಾಯ ಪಡೆದನು.* ಬ್ರಿಟಿಷರಿಗೆ ಸಿಂಹಸ್ವಪ್ನವಾದ ರಾಯಣ್ಣ ಬ್ರಿಟಿಷರ ಸಂಚಿಗೆ ಬಲಿಯಾಗಿ ಗಲ್ಲಿಗೇರಿಸಲ್ಪಟ್ಟ. * ಸಂಗೊಳ್ಳಿ ರಾಯಣ್ಣನ ದೇಶಪ್ರೇಮ ಇಂದಿಗೂ ಅವಿಸ್ಮರಣೀಯವಾಗಿದೆ.

## 3. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು

**1. ಬ್ರಹ್ಮ ಸಮಾಜವು ಸಮಾಜಕ್ಕೆ ನೀಡಿದ ಕೊಡುಗೆಗಳು ಯಾವವು?**

**ಏಕದೇವತಾ ಆರಾಧನೆಯನ್ನು ಪ್ರತಿಪಾದಿಸಿದರು.**

* ಅರ್ಥಹೀನ ಆಚರಣೆಗಳನ್ನು ವಿರೋಧಿಸಿದರು.
* ಪತ್ರಿಕಾ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದರು.
* ಸಮಾಜದಲ್ಲಿದ್ದ ಮೂಢನಂಬಿಕೆಗಳನ್ನು ವಿರೋಧಿಸಿದರು.
* ಸ್ತ್ರೀ ಸಮಾನತೆ ಮತ್ತು ಇಂಗ್ಲೀಷ್ ಶಿಕ್ಷಣಕ್ಕೆ ಒತ್ತು ನೀಡಿದರು.
* ಒಳ್ಳೆಯದು ಎಲ್ಲಿದ್ದರೂ ಅದನ್ನು ಸ್ವೀಕರಿಸಬೇಕು ಎಂದು ತಿಳಿಸಿದರು.
* ಭಾರತೀಯ ಸಮಾಜದ ನವೀಕರಣಕ್ಕೆ ಬ್ರಹ್ಮ ಸಮಾಜ ವಿಶಿಷ್ಟವಾದ ಕೊಡುಗೆಯನ್ನು ನೀಡಿದೆ.

**2. ಆರ್ಯ ಸಮಾಜದ ಪ್ರಮುಖ ಬೋಧನೆಗಳಾವವು ?**

* ಒಬ್ಬನೇ ದೇವರಲ್ಲಿ ನಂಬಿಕೆ ಇಡಬೇಕು.
* ಹುಟ್ಟಿನಿಂದ ಯಾರೂ ಶೂದ್ರರಲ್ಲಾ ಮತ್ತು ಯಾರೂ ಬ್ರಾಹ್ಮಣರಲ್ಲ.
* ಜಾತಿಯತೆಯನ್ನು ತೀವ್ರವಾಗಿ ವಿರೋಧಿಸಿತು.
* ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹಿಸಿದರು.
* ಬಹುಪತ್ನಿತ್ವ, ಬಾಲ್ಯ ವಿವಾಹ ಮತ್ತು ಸತಿ ಪದ್ಧತಿಗಳನ್ನು ವಿರೋಧಿಸಿದರು.
* ಸ್ತ್ರೀ ಪುರುಷ ಸಮಾನತೆಯನ್ನು ಸಾರಿದರು.
* ವೇದಗಳು ಮಾತ್ರ ಶ್ರೇಷ್ಠ ಪ್ರಾಚೀನ ಗ್ರಂಥಗಳನ್ನು ಅಧ್ಯಯನ ಮಾಡಬೇಕೆಂದು ಬೋಧಿಸಿದರು.

**3. ಸ್ವಾಮಿ ವಿವೇಕಾನಂದರು ಯುವಶಕ್ತಿ ಪ್ರೇರಕರಾಗಿದ್ದರು. ವಿವರಿಸಿ.**

* ಸ್ವಾಮಿ ವಿವೇಕಾನಂದರು ಭಾರತದಲ್ಲಿ ರಾಮಕೃಷ್ಣ ಮಿಷೀನ್ ಸ್ಥಾಪಿಸಿದರು.
* ಯುವಕರಿಗೆ ಜೀವನ ಮತ್ತು ಪ್ರೀತಿಯಲ್ಲಿರುವ ಮಹತ್ವ ತಿಳಿಸಿದರು.
* ಯುವಜನತೆಯ ಶಿಕ್ಷಣಕ್ಕಾಗಿ ವಿಶೇಷ ಕಾಳಜಿ ವಹಿಸಿದರು.
* ಭಾರತೀಯ ಸಂಸ್ಕೃತಿ ಮತ್ತು ಧರ್ಮವನ್ನು ಪ್ರಪಂಚಕ್ಕೆ ಪರಿಚಯಿಸಿದರು.
* ಬಡವರ, ದೀನ ದಲಿತರ ಸೇವೆಯೇ ದೇವರ ಸೇವೆ ಎಂದು ಸಾರಿದರು.
* ಭಾರತದ ಹಿರಿಮೆಯನ್ನು ಜಗತ್ತಿಗೆ ಸಾರಿದರು.
* ಹೀಗೆ ಇವರು ಭಾರತೀಯ ಯುವಕರಲ್ಲಿ ಒಂದು ಪ್ರೇರಣಾ ಶಕ್ತಿಯಾಗಿದ್ದರು.

## 4. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

**1. ಭಾರತದ ಪ್ರಥಮ ಸ್ವಾತಂತ್ರ ಸಂಗ್ರಾಮಕ್ಕೆ ಕಾರಣವಾದಂತಹ ಅಂಶಗಳನ್ನು ಪಟ್ಟಿ ಮಾಡಿ.**

* ರಾಜಕೀಯ ಕಾರಣಗಳು. * ಆರ್ಥಿಕ ಕಾರಣಗಳು.
* ಆಡಳಿತಾತ್ಮಕ ಕಾರಣಗಳು.* ಸಾಮಾಜಿಕ ಕಾರಣಗಳು.
* ಸೈನಿಕ ಕಾರಣಗಳು. * ತಕ್ಷಣದ ಕಾರಣ.

**2. ಪ್ರಥಮ ಸ್ವಾತಂತ್ರ ಸಂಗ್ರಾಮಕ್ಕೆ ಆಡಳಿತಾತ್ಮಕ ಮತ್ತು ಸೈನಿಕ ಕಾರಣಗಳು ಹೇಗೆ ಕಾರಣವಾದವು?**

**ಆಡಳಿತಾತ್ಮಕ ಕಾರಣಗಳು:–** .* ಇಂಗ್ಲಿಷರ ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆಗಳು ಭಾರತೀಯರಿಗೆ ಅರ್ಥವಾಗಲಿಲ್ಲ.

* ಕಾನೂನಿನಲ್ಲಿ ಪಕ್ಷಪಾತ ಮತ್ತು ಭಾರತೀಯರಿಗೆ ಪ್ರತ್ಯೇಕ ನಿಯಮಗಳು ಅನ್ವಯವಾಗುತ್ತಿದ್ಧವು.
* ಆಂಗ್ಲ ಭಾಷೆಯು ನ್ಯಾಯಾಲಯದ ಭಾಷೆಯಾಯಿತು.
* ಹೊಸ ಕಾನೂನಿನ ಆಶಯಗಳು ಜನರಿಗೆ ಅರ್ಥವಾಗಲಿಲ್ಲ.

**ಸೈನಿಕ ಕಾರಣಗಳು:–**

* ಬ್ರಿಟಿಷ್ ಸೈನ್ಯದಲ್ಲಿದ್ದ ಭಾರತೀಯ ಸಿಪಾಯಿಗಳ ಸ್ಥಿತಿ ಚಿಂತಾಜನಕವಾಗಿತ್ತು.
* ಬ್ರಿಟಿಷ್ ಸೈನಿಕರಿಗೆ ಇದ್ದ, ವೇತನ, ಬಡ್ತಿ ಅವಕಾಶಗಳು ಭಾರತೀಯ ಸಿಪಾಯಿಗಳಿಗೆ ಇರಲಿಲ್ಲ.
* ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು.

**3. ಪ್ರಥಮ ಸ್ವಾತಂತ್ರ ಸಂಗ್ರಾಮಕ್ಕೆ ರಾಜಕೀಯ ಮತ್ತು ಆರ್ಥಿಕ ಕಾರಣಗಳು ಹೇಗೆ ಕಾರಣವಾದವು?**

**ರಾಜಕೀಯ ಕಾರಣಗಳು :–** * ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದಾಗಿ ಅನೇಕ ದೇಶಿಯ ರಾಜರು ತಮ್ಮ ರಾಜ್ಯವನ್ನು ಕಳೆದುಕೊಂಡರು.

* ತಂಜಾವೂರು ಮತ್ತು ಕರ್ನಾಟಿಕ್ ನವಾಬರಿಗಿದ್ಧ ರಾಜ ಪದವಿಯನ್ನು ರದ್ದುಗೊಳಿಸಿದ್ದು.
* ಮೊಘಲ್ ಚಕ್ರವರ್ತಿ, ಔದ್ ನ ನವಾಬನನ್ನು ಅಧಿಕಾರದಿಂದ ಪದಚ್ಯುತಗೊಳಿಸಿದರು. * ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು.

**ಆರ್ಥಿಕ ಕಾರಣಗಳು:–**

* ಇಂಗ್ಲೆಂಡಿನಲ್ಲಿ ಆದ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ದೇಶಿಯ ಕೈಗಾರಿಕೆಗಳು ನಾಶವಾದವು.
* ಭಾರತದಲ್ಲಿ ಲಕ್ಷಾಂತರ ಜನ ನಿರುದ್ಯೋಗಿಗಳಾದರು.
* ಜಮೀನ್ದಾರಿ ಪದ್ಧತಿಯಿಂದ ಕೃಷಿಕರು ಶೋಷಣೆಗೊಳಗಾದರು.
* ಇನಾಂ ಆಯೋಗ ಇನಾಂ ಭೂಮಿಯನ್ನು ವಾಪಸ್ ಪಡೆಯಿತು.

**4. 1857 ರ ದಂಗೆಯ ವಿಫಲತೆಗೆ ಕಾರಣಗಳಾವುವು?**

* ಈ ದಂಗೆಯು ಇಡೀ ಭಾರತವನ್ನು ವ್ಯಾಪಿಸಿರಲಿಲ್ಲ.
* ಇದು ಯೋಜಿತ ದಂಗೆ ಯಾಗಿರಲಿಲ್ಲ.
* ಭಾರತೀಯ ಸಿಪಾಯಿಗಳಲ್ಲಿ ಒಗ್ಗಟ್ಟಿರಲಿಲ್ಲ.
* ಸೂಕ್ತ ನಾಯಕರ ಮತ್ತು ಸಂಘಟನೆಯ ಕೊರತೆ.
* ಭಾರತೀಯ ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ.
* ಅನೇಕ ಭಾರತೀಯ ರಾಜರು ಬ್ರಿಟಿಷರಿಗೆ ತೋರಿದ ನಿಷ್ಠೆ.
* ಭಾರತೀಯ ಸಿಪಾಯಿಗಳು ಲೂಟಿ, ದರೋಡೆ ಮಾಡಿ ಜನರ ವಿಶ್ವಾಸವನ್ನು ಕಳೆದುಕೊಂಡರು.

**5. 1857 ರ ದಂಗೆಯ ಪರಿಣಾಮಗಳಾವವು? ಅಥವಾ 1858 ರ ಬ್ರಿಟನ್ ರಾಣಿಯ ಘೋಷಣೆಯಲ್ಲಿ ಇದ್ದಂತಹ ಅಂಶಗಳಾವುವು?**

* ಕಂಪನಿಯು ದೇಶಿಯ ರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳನ್ನು ಅಂಗೀಕರಿಸಲಾಯಿತು.
* ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈಬಿಡುವುದು.
* ಭಾರತೀಯರಿಗೆ ಸುಭದ್ರ ಸರ್ಕಾರವನ್ನು ನೀಡುವುದು.
*ಕಾನೂನಿನ ಮುಂದೆ ಸಮಾನತೆ.
* ಭಾರತೀಯರ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ.
* ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಭಾರತೀಯರನ್ನು ಒಳಗೊಳ್ಳಿಸುವುದು.
* ಈ ದಂಗೆಯು ಭಾರತೀಯ ಸ್ವತಂತ್ರ ಹೋರಾಟಕ್ಕೆ ಹೊಸ ದಿಕ್ಸೂಚಿಯಾಯಿತು.

## 5 ಸ್ವಾತಂತ್ರ್ಯ ಹೋರಾಟ

**1. ಬ್ರಿಟಿಷ್ ಸರ್ಕಾರದ ಮುಂದಿಟ್ಟ ಮಂದಗಾಮಿಗಳ ಬೇಡಿಕೆಗಳಾವುವು?**

* ದೇಶದ ಕೈಗಾರಿಕೆಗಳ ಅಭಿವೃದ್ಧಿ.
* ಸೈನಿಕ ವೆಚ್ಚ ಕಡಿಮೆ ಮಾಡುವುದು.
* ಉತ್ತಮ ಶಿಕ್ಷಣ ಕೊಡುವುದು.
* ಬಡತನದ ಬಗ್ಗೆ ಅಧ್ಯಯನ ಮತ್ತು ಪರಿಹಾರ ಕ್ರಮಗಳು.

**2. ತೀವ್ರಗಾಮಿಗಳ ಹೋರಾಟ ವಿಧಾನವನ್ನು ತಿಳಿಸಿ ಅಥವಾ ಸ್ವತಂತ್ರ್ಯ ಚಳುವಳಿಯಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ತಳಿಸಿ.**

* ತೀವ್ರಗಾಮಿಗಳು ಕಾಂಗ್ರೆಸಿಗರಲ್ಲೆ ಅಸಂತೃಪ್ತರಾಗಿದ್ದ ಇನ್ನೊಂದು ಗುಂಪಾಗಿದ್ದರು.
* ಲಾಲ್, ಪಾಲ್, ಬಾಲ್ ಇವರು ತೀವ್ರಗಾಮಿಗಳಲ್ಲಿ ಪ್ರಮುಖರಾದವರು.
* ಬಂಗಾಳದ ವಿಭಜನೆಯನ್ನು ವಿರೋಧಿಸಿದರು.
* ಸ್ವದೇಶಿ ಚಳುವಳಿಯನ್ನು ಆರಂಭಿಸಿದರು.
* "ತಿಲಕರು ಸ್ವರಜ್ಯವೇ ನನ್ನ ಜನ್ಮ ಸಿದ್ಧ ಹಕ್ಕು ಅದನ್ನು ನಾನು ಪಡೆದೆ ತೀರುವೆ" ಎಂದು ಘೋಷಿಸಿದರು.
* ಧಾರ್ಮಿಕ ಆಚರಣೆಯ ಮೂಲಕ ಜನರನ್ನು ಸಂಘಟಿಸಿದರು.
* ಕೇಸರಿ ಮತ್ತು ಮರಾಠ ಪತ್ರಿಕೆಗಳ ಮೂಲಕ ಜನರಲ್ಲಿ ರಾಷ್ಟ್ರೀಯತೆಯನ್ನು ಮಂಡಿಸಿದರು.
* ತಿಲಕರು ಗೀತಾರಹಸ್ಯ ಗ್ರಂಥದ ಮೂಲಕ ಸ್ವಾತಂತ್ರ್ಯ ಹೋರಾಟದ ತೀವ್ರತೆ ತಂದು ಕೊಟ್ಟರು.

**3. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಕ್ರಾಂತಿಕಾರಿಗಳ ಪಾತ್ರ ಪ್ರಮುಖವಾದ್ದು ಹೇಗೆ?**

* ಕ್ರಾಂತಿಕಾರಿಗಳು ಬ್ರಟಿರಷರನ್ನು ಹಿಂಸಾತ್ಮಕ ಮಾರ್ಗದಿಂದ ಓಡಿಸಬಹುದೆಂದು ಬಲವಾದ ನಂಬಿಕೆ ಹೊಂದಿದ್ದರು.
* ಭಾರತದಲ್ಲಿ ಅನುಶೀಲನಾ ಸಮಿತಿ ಮತ್ತು ಅಭಿನವ ಭಾರತ ರಹಸ್ಯ ಸಂಘಟನೆಗಳನ್ನು ಕಟ್ಟಿದರು.
* ತಮ್ಮ ಗುರಿ ಸಾಧನೆಗಾಗಿ ಬಾಂಬ್ ಮತ್ತು ಬಂದೂಕುಗಳ ಪ್ರಯೋಗ ಮಾಡಿದರು.
* ಸರ್ಕಾರವು ಕ್ರಾಂತಿಕಾರಿಗಳನ್ನು ಹತ್ತಿಕ್ಕುವ ಸರ್ವ ಪ್ರಯತ್ನ ಮಾಡಿತು.
* ಅರವಿಂದ ಘೋಷ್ ಭಗತ್‌ಸಿಂಗ್, ಚಂದ್ರಶೇಖರ ಆಜಾದ್, ವಿ.ಡಿ. ಸಾವರ್ಕರ್, ರಾಜ್‌ಗುರು, ಸುಖ್‌ದೇವ್ ಪ್ರಮುಖ ಕ್ರಾಂತಿಕಾರಿಗಳು.
* ಕ್ರಾಂತಿಕಾರಿಗಳ ಹೋರಾಟ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುವಲ್ಲಿ ವಿಫಲವಾದರೂ ಅವರು ರಾಷ್ಟ್ರೀಯ ಆಂದೋಲನಕ್ಕೆ ಸ್ಪೂರ್ತಿಯ ಚಿಲುಮೆಯಾಗಿದ್ದರು.

## 6. ಗಾಂಧಿಯುಗ ಮತ್ತು ರಾಷ್ಟ್ರೀಯ ಹೋರಾಟ

**1. ನೆಹರೂರವರು ಪ್ರಧಾನ ಮಂತ್ರಿಯಾದ ನಂತರ ದೇಶಕ್ಕೆ ನೀಡಿದ ಕೊಡುಗೆಗಳೇನು?**

* ದೇಶಿ ಸಂಸ್ಥಾನಗಳ ವಿಲೀನಕ್ಕೆ ಕಾರಣರಾದವರು.
* ಭಾಷಾವಾರು ಪ್ರಾಂತ್ಯಗಳ ರಚನೆ. * ಮಿಶ್ರ ಆರ್ಥಿಕ ನೀತಿ.
* ಬೃಹತ್ ಕೈಗಾರೀಕೀಕರಣ. * ಪಂಚವಾರ್ಷಿಕ ಯೋಜನೆ .
* ಆಲಪ್ತ ನೀತಿ ಪ್ರತಿಪಾದನೆ. * ಪಂಚಶೀಲ ತತ್ವ.
* ಶಾಂತಿ ಸಹಬಾಳ್ವೆ ಸೂತ್ರ.

**2. ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧಿಜಿಯವರ ಪಾತ್ರವನ್ನು ವಿವರಿಸಿ.**

* ತಮ್ಮ ಹೋರಾಟದಲ್ಲಿ ಅಹಿಂಸಾ ತಂತ್ರ ಬಳಸಿದರು.
* ಸತ್ಯಾಗ್ರಹ ಇವರ ಪ್ರಮುಖ ಅಸ್ತ್ರ.
* 1919ರ ರೌಲತ್ ಕಾಯಿದೆ ವಿರೋಧಿಸಿದರು.
* 1920 ರಲ್ಲಿ ಅಸಹಕಾರ ಚಳುವಳಿಗೆ ಕರೆ ನೀಡಿದರು.
* ಚೌರಿ ಚೌರಾ ಘಟನೆಯಿಂದ ಬೇಸತ್ತು ಅಸಹಕಾರ ಚಳುವಳಿಯನ್ನು ಹಿಂತೆಗೆದುಕೊಂಡರು.
* 1930 ರಲ್ಲಿ ದಂಡಿ ಸತ್ಯಾಗ್ರಹದಲ್ಲಿ ನಡೆಸಿದರು.
* 1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ನಾಯಕತ್ವ ವಹಿಸಿಕೊಂಡರು.
* ಜನತೆಗೆ ಮಾಡು ಇಲ್ಲವೇ ಮಡಿ ಎಂಬ ಕರೆ ನೀಡಿದರು.

**3. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸ್ ರವರ ಪಾತ್ರವನ್ನು ವಿವರಿಸಿ.**

* ವಿದೇಶದಲ್ಲಿರುವ ಭಾರತೀಯರನ್ನು ಸಂಘಟಿಸಿ ಬ್ರಿಟೀಷರ ವಿರುದ್ಧ ಹೋರಾಡಿದರು.
* ನೆಹರೂರವರ ಜತೆಗೂಡಿ ಸಮಾಜವಾದಿ ಪಕ್ಷ ಸ್ಥಾಪಿಸಿದರು.
* ಫಾರ್ವರ್ಡ್ ಬ್ಲಾಕ್ ಪಕ್ಷ ಕಟ್ಟಿದರು.
* ಬ್ರಟೀಷರು ಸುಭಾಷರನ್ನು ಗೃಹಾ ಬಂಧನದಲ್ಲಿ ಇಟ್ಟಾಗ ಅಲ್ಲಿಂದ ತಪ್ಪಿಸಿಕೊಂಡು ಜರ್ಮನಿಗೆ ತೆರಳಿದರು.
* ಭಾರತದ ಸ್ವಾತಂತ್ರ್ಯಕ್ಕಾಗಿ ಹಿಟ್ಲರ್ ಮತ್ತು ಮುಸಲೋನಿಯಾ ಸಹಾಯ ಕೇಳಿದರು.
* ಅಜಾದ್ ಹಿಂದ್ ರೇಡಿಯೋ ಮೂಲಕ ತಮ್ಮ ಭಾಷಣವನ್ನು ಭಾರತೀಯರಿಗೆ ಪ್ರಸರಣ ಮಾಡಿದರು.
* ಭಾರತೀಯ ರಾಷ್ಟ್ರೀಯ ಸೇನೆ ಸ್ಥಾಪಿಸಿದರು.
* ದೆಹಲಿ ಚಲೋಗೆ ಕರೆ ನೀಡಿದರು.

**4. ಸಮಾಜಿಕ ಸಮಾನತೆ ಕಾಪಾಡುವಲ್ಲಿ ಡಾ. ಬಿ. ಆರ್. ಅಂಬೇಡ್ಕರ್‌ರವರ ಕೊಡುಗೆ ಏನು?**

* ಸಮಾಜಿಕ ಸ್ವಾತಂತ್ರ್ಯವಿಲ್ಲದೆ ರಾಜಕೀಯ ಸ್ವಾತಂತ್ರ್ಯ ಅರ್ಥಹೀನ ಎಂದರು.
* ಜಾತಿ ವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿದರು.
* ಮಹದ್ ಮತ್ತು ಕಾಲರಂ ದೇವಾಲಯ ಚಳುವಳಿ ರೂಪಿಸಿದರು.
* ಅಸ್ಪೃಶ್ಯರಿಗಾಗಿ ಪ್ರತ್ಯೇಕ ಮತ ಕ್ಷೇತ್ರ ಬಯಸಿದರು.
* ಬಹಿಷ್ಕೃತ ಹಿತಕಾರಿಣಿ ಸಭಾ ಸಂಘಟಿಸಿದರು.
* ಸ್ವತಂತ್ರ್ಯ ಕಾರ್ಮಿಕ ಪಕ್ಷ ಸ್ಥಾಪಿಸಿದರು.
* ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿದ್ದರು.
* ಸ್ವತಂತ್ರ್ಯ ಭಾರತದ ಮೊದಲ ಕಾನೂನು ಮಂತ್ರಿಯಾದರು.

**5. ಭಾರತೀಯ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಅಸಹಕಾರ ಚಳುವಳಿಯ ಕಾರ್ಯಕ್ರಮವನ್ನು ವಿವರಿಸಿ.**

* ಚಿತ್ತರಂಜನ್ ದಾಸ್, ನೆಹರು, ರಾಜೇಂದ್ರ ಪ್ರಸಾದ್ ರವರು ವಕೀಲ ವೃತ್ತಿಯನ್ನು ತ್ಯಜಿಸಿದರು.
* ವಿದ್ಯಾರ್ಥಿಗಳಿಂದ ಶಾಲಾ ಕಾಲೇಜು ಬಹಿಷ್ಕಾರ.
* 1919 ರ ಕಾಯ್ದೆ ಅಡಿಯಲ್ಲಿ ಪ್ರಾಂತ್ಯಗಳಿಗೆ ನಡೆದ ಚುನಾವಣೆಯು ಕಾಂಗ್ರೇಸ್‌ನಿಂದ ಬಹಿಷ್ಕಾರ.
* ರಾಷ್ಟ್ರೀಯ ವಿದ್ಯಾಲಯಗಳ ಸ್ಥಾಪನೆ.
* ರವೀಂದ್ರನಾಥ ಠಾಗೋರ್ ಬ್ರಿಟಿಷರು ನೀಡಿದ ನೈಟ್‌ಹುಡ್ ಪದವಿಯನ್ನು ಸರ್ಕಾರಕ್ಕೆ ಹಿಂದಿರುಗಿಸಿದರು.
* ಅಸಾಮಾನ್ಯರು ಕಾಂಗ್ರೇಸ್ ಹೋರಾಟಕ್ಕೆ ದೇಣಿಗೆ ನೀಡಿದರು.
* ವಿದೇಶಿ ವಸ್ತುಗಳ ಬಹಿಷ್ಕಾರ ಕರೆ.
* 1921ರಲ್ಲಿ ಪ್ರಿನ್ಸ್ ಆಫ್ ವೇಲ್ಸ್ ರಾಜಕುಮಾರ ಬರುವ ಕಾರ್ಯಕ್ರಮಕ್ಕೆ ವಿರೋಧ ಎನ್ನುವ ಕರೆ ನೀಡಿದರು.

**6. ಸವಿನಯ ಕಾನೂನು ಭಂಗ ಅಥವಾ ಉಪ್ಪಿನ ಸತ್ಯಾಗ್ರಹವನ್ನು ವಿವರಿಸಿ.**

* ಗಾಂಧೀಜಿಯವರು 1930ರಂದು 11 ಅಂಶಗಳ ಬೇಡಿಕೆಯನ್ನು ವೈಸರಾಯ್ ಮುಂದೆ ಇಟ್ಟರು.
* ಸರ್ಕಾರ ಇದಕ್ಕೆ ತಪ್ಪಿದಲ್ಲಿ ಕಾನೂನು ಭಂಗ ಚಳುವಳಿ ಆರಂಭಿಸುವುದಾಗಿ ಘೋಷಿಸಿದರು.
* ವೈಸರಾಯ್ ಈ ಪತ್ರವನ್ನು ತಿರಸ್ಕರಿಸಿದ ಕಾರಣ ಗಾಂಧೀಜಿಯವರು ಸಬರಮಂತಿ ಆಶ್ರಮದಿಂದ ದಂಡಿಯವರೆಗೆ 375 ಕಿ.ಮೀ. ದೂರ ಕ್ರಮಿಸಿದರು.
* ಏಪ್ರಿಲ್ 6ರಂದು ದಂಡಿ ತಲುಪಿ ಉಪ್ಪನ್ನು ತಯಾರಿಸುವ ಮೂಲಕ ಉಪ್ಪಿನ ಕಾನೂನನ್ನು ಮುರಿದರು.
* ಚರಕ ಈ ಚಳುವಳಿಯಲ್ಲಿ ಬಹಳ ಪ್ರಸಿದ್ಧವಾಯಿತು.
* ಗಾಂಧೀಜಿಯ ಕರೆಗೆ ಸಾವಿರಾರು ಜನ ಸ್ಪಂದಿಸಿದರು.
* ಉಪ್ಪಿನ ಸತ್ಯಾಗ್ರಹದ ನಂತರ ಏಪ್ರಲ್ 6 ರಿಂದ 13ರವರೆಗೆ ರಾಷ್ಟ್ರೀಯ ಚಳುವಳಿ ಸಪ್ತಾಹ ಆಚರಿಸಿದರು.
* ಈ ಚಳುವಳಿಯಲ್ಲಿ ಗಾಂಧೀಜಿಯೊಂದಿಗೆ ಭಾಗವಹಿಸಿದ ವಿಜಯಲಕ್ಷ್ಮಿ ಪಂಡಿತ್, ಕಮಲಾ ನೆಹರು, ಪಾಟೇಲ್ ಮುಂತಾದವನ್ನು ಬ್ರಿಟೀಷರು ಬಂಧಿಸಿದರು.

**7. ಕ್ವಿಟ್ ಇಂಡಿಯಾ ಚಳುವಳಿ ನಡೆದ ರೀತಿಯನ್ನು ವಿವರಿಸಿ.**

* ಬ್ರಿಟೀಷರೇ ಭಾರತ ಬಿಟ್ಟು ತೊಲಗೆ ಈ ಚಳುವಳಿಯ ಆಶಯವಾಗಿತ್ತು.
* ಗಾಂಧೀಜಿಯವರು ಜನರಿಗೆ ಮಾಡು ಇಲ್ಲವೇ ಮಡಿ.
* ಈ ಕರೆಯನ್ನು ನೀಡಿದ ಹಿನ್ನಲೆಯಲ್ಲಿ ಪ್ರಮುಖ ರಾಷ್ಟ್ರೀಯ ನಾಯಕರನ್ನು ಬಂಧಿಸಲಾಯಿತು.
* ಕಾಂಗ್ರೇಸ್ ನಾಯಕರು ಬಂಧನದಲ್ಲಿ ಇದ್ದಕಾರಣ ಕಾಂಗ್ರೇಸ್ಸೇತರ ಸಂಘಟನೆಯ ಮುಖ್ಯ ಭೂಮಿಕೆಯಲ್ಲಿದ್ದರು.
* ಈ ಸಂದರ್ಭದಲ್ಲಿ ಚಳುವಳಿಯ ನೇತೃತ್ವವನ್ನು ಜಯಪ್ರಕಾಶ ನಾರಾಯಣರು ವಹಿಸಿಕೊಂಡರು.
* ಇವರು ತಮ್ಮ ಬೆಂಬಲಿಗರೊಂದಿಗೆ ವಿವಿಧ ಕಡೆಗಳಲ್ಲಿ ಕ್ರಾಂತಿಕಾರಕ ಚಟುವಟಿಕೆಯಲ್ಲಿ ತೊಡಗಿಕೊಂಡರು.
* ಫ್ರೀಡಂ ಸ್ಟ್ರಗಲ್ ಫ್ರಾಂಟ್ ಎಂಬ ದಾಖಲೆಯ ಮೂಲಕ ತಮ್ಮ ಕಾರ್ಯತಂತ್ರವನ್ನು ಅನುಷ್ಟಾನಕ್ಕೆ ತಂದರು.
* ಹೋರಾಟದಲ್ಲಿ ಭಾಗವಹಿಸಲು ಕರೆ ನೀಡಿದರು.

**8. ಸ್ವಾತಂತ್ರ್ಯ ಹೋರಾಟದಲ್ಲಿ ರೈತರು ಕಾರ್ಮಿಕರು ಮತ್ತು ಬುಡಕಟ್ಟು ಬಂಡಾಯಗಳನ್ನು ವಿವರಿಸಿ.**

* ತೆಲಂಗಾಣದಲ್ಲಿ ಜಮೀನ್ದಾರರು ಮತ್ತು ರಜಾಕರರ ವಿರುದ್ಧ ರೈತರ ಹೋರಾಟ.
* ಬಂಗಾಳದಲ್ಲಿ ಜಮೀನ್ದಾರರ ವಿರುದ್ಧ ರೈತರ ಹೋರಾಟ.
* ಮಹಾರಾಷ್ಟ್ರದಲ್ಲಿ ರೈತರ ಕಡಿಮೆ ಕೂಲಿಯ ವಿರುದ್ಧ ಹೋರಾಟ.
* ಹೆಚ್ಚಿನ ಕೂಲಿಗಾಗಿ ಬ್ರಿಟೀಷರ ವಿರುದ್ಧ ರೈಲ್ವೆ ಕೂಲಿಗರ ಹೋರಾಟ.
* ಕಲ್ಕತ್ತದಲ್ಲಿ ಪ್ರಿಂಟರ್ಸ್ ಯೂನಿಯನ್ ಚಳುವಳಿ.
* ಬಾಂಬೆ ಬಟ್ಟೆ ಗಿರಣಿ ಕಾರ್ಮಿಕರ ಹೋರಾಟ.
* ಹಲಗಲಿ ಬೇಡರ ಬಂಡಾಯ.
* ಸಂತಾಲ ಬುಡಕಟ್ಟು ಜನಾಂಗ.
* ಮುಂಡ ಚಳುವಳಿ.

## ರಾಜ್ಯಶಾಸ್ತ್ರ

## 1. ಭಾರತದ ವಿದೇಶಾಂಗ ನೀತಿ

**1 ಭಾರತವು ಪ್ರಭಾವಶಾಲಿ ರಾಷ್ಟ್ರವಾಗಿ ವಿಶ್ವಮಾನ್ಯ ಪಡೆಯಲು ಕಾರಣಗಳೇನು?**

* ವಿಪುಲ ಜನಸಂಖ್ಯೆ * ಅಪಾರ ಪ್ರಾಕೃತಿಕ ಸಂಪನ್ಮೂಲ
* ಪರಿಣಿತ ಬೌದ್ಧಿಕ ಸಂಪತ್ತು * ಔದ್ಯೋಗಿಕ ಸಾಮಾರ್ಥ್ಯ
* ಬಲಾಢ್ಯ ಸೈನಿಕ ಬಲ * ಉತ್ತಮ ವಿದೇಶಾಂಗ ನೀತಿ

**2. ವಿದೇಶಾಂಗ ನೀತಿಯನ್ನು ಪ್ರಭಾವಿಸುವ ಅಂಶಗಳಾವುವು?**

* ರಾಷ್ಟ್ರೀಯ ಹಿತಾಸಕ್ತಿ *ಭೌಗೋಳಿಕ ಅಂಶಗಳು
* ರಾಜಕೀಯ ಪರಿಸ್ಥಿತಿ * ಆರ್ಥಿಕ ಸಾಮರ್ಥ್ಯ
* ರಕ್ಷಣಾ ಸಾಮರ್ಥ್ಯ * ಜನಾಭಿಪ್ರಾಯ *ಅಂತರಾಷ್ಟ್ರೀಯ ಪರಿಸರ

**3. ಭಾರತದ ವಿದೇಶಾಂಗ ನೀತಿಯ ಮೂಲಭೂತ ಅಂಶಗಳು ಯಾವುವು?**

* ಪಂಚಶೀಲ ತತ್ವಗಳು * ಅಲಿಪ್ತ ನೀತಿಗಳು
* ವಸಹತುಶಾಹಿತ್ವಕ್ಕೆ ವಿರೋಧ * ನಿಶ್ಯಸ್ತ್ರೀಕರಣ
* ವರ್ಣಭೇದ ನೀತಿಗೆ ವಿರೋಧ

**4. ಪಂಚಶೀಲ ತತ್ವಗಳಾವುವು?**

* ಭಾರತ ಮತ್ತು ಚೀನಾ ನಡುವೆ ಜಾರಿ
* ಪರಸ್ಪರ ರಾಷ್ಟ್ರಗಳ ಪ್ರಾದೇಶಿಕ ಮತ್ತು ಸಾರ್ವಭೌಮತೆಗೆ ಗೌರವ
* ಪರಸ್ಪರ ಆಕ್ರಮಣ ಮಾಡದೆ ಇರುವುದು.
* ಪರಸ್ಪರ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡದಿರುವುದು
* ಪರಸ್ಪರ ಸಹಕಾರ ಮತ್ತು ಸಮಾನತೆ
* ಪರಸ್ಪರ ಶಾಂತಿಯುತ ಸಹಬಾಳ್ವೆ

**5. ನಿಶ್ಯಸ್ತ್ರೀಕರಣ ಅಗತ್ಯ ಎಂದು ಭಾರತ ಏಕೆ ಪ್ರತಿಪಾದಿಸುತ್ತಿದೆ?**

* ಶಸ್ತ್ರಾಸ್ತ್ರಗಳ ಉತ್ಪಾದನೆ ಮತ್ತು ಮಾರಾಟದಲ್ಲಿದಲ್ಲಿ ಭಾರೀ ಪೈಪೋಟಿ ಉಂಟಾಗಿದೆ.
* ವಿಶ್ವದಾದ್ಯಂತ ಭಯ, ಅಸ್ತಿರತೆ ಸನ್ನಿವೇಶ ತಲೆದೋರಿದೆ.
* ಶಸ್ತ್ರಾಸ್ತ್ರಗಳ ಮತ್ತು ಮದ್ದುಗುಂಡುಗಳು ಆರ್ಥಿಕವಾಗಿಯೂ ನಷ್ಟದಾಯಕವಾಗಿದೆ.
* ಜಗತ್ತಿನ ಮೂರನೆ ಮಹಾಯುದ್ಧ ಮತ್ತು ಅಣ್ವಸ್ತ್ರ ಬಳಕೆಯ ಭೀತಿ ಉಂಟಾಗಿದೆ.
* ಮುಂದಿನ ಜಾಗತಿಕ ಸುರಕ್ಷೆಯ ದೃಷ್ಟಿಯಿಂದ ಯುದ್ಧಗಳ ನಿವಾರಣೆ ತುಂಬಾ ಅವಶ್ಯಕವಾಗಿದೆ.
* ಈ ಎಲ್ಲಾ ಅನಿಷ್ಟಗಳನ್ನು ದೂರವಿರಿಸಲು ನಿಶ್ಯಸ್ತ್ರೀಕರಣ ಪ್ರಚಲಿತ ಜಗತ್ತಿಗೆ ಅವಶ್ಯಕವಾಗಿದೆ.

## 2. ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

**1. ಅನ್ಯರಾಷ್ಟ್ರಗಳೊಂದಿಗೆ ಉತ್ತಮ ಭಾಂದವ್ಯ ಅವಶ್ಯಕ ಏಕೆ?**

* ವಿಶ್ವ ಕುಟುಂಬದ ಪರಿಕಲ್ಪನೆಯ ಸಾಕಾರ
* ಪರಸ್ಪರ ಸಹಕಾರ ಮತ್ತು ಅನ್ಯೋನ್ಯತೆ
* ರಾಷ್ಟ್ರೀಯ ಹಿತಾಸಕ್ತಿಗಳು * ಗಡಿ ಭದ್ರತೆ
* ವಿದೇಶ ವ್ಯಾಪಾರ * ಆರ್ಥಿಕ ಲಾಭ * ರಾಷ್ಟ್ರದ ಗೌರವ

**2. ಭಾರತ ಮತ್ತು ಚೀನಾ ನಡುವಿನ ಭಾಂದವ್ಯಕ್ಕೆ ಅಡ್ಡಿಯಾಗಿರುವ ಅಂಶಗಳಾವುವು?**

* ಟಿಬೆಟ್ ವಿವಾದ * 1962ರ ಭಾರತ ಮತ್ತು ಚೀನಾ ಯುದ್ಧ
* ಗಡಿ ವಿವಾದ *ಅರುಣಾಚಲ ಪ್ರದೇಶ ತನ್ನದೆನ್ನುತ್ತಿರುವ ಚೀನಾವಾದ

**3. ಭಾರತ ಮತ್ತು ಚೀನಾ ದೇಶಗಳ ನಡುವಿನ ಸಂಬಂಧವು ಪ್ರಾಚೀನ ಕಾಲದಿಂದಲೂ ಇತ್ತು ಎಂಬುದನ್ನು ಸಮರ್ಥಿಸಿ.**
* ಸಿಂಧೂ ನದಿ ಬಯಲಿನ ನಾಗರೀಕತೆಯ ಕಾಲದಿಂದ ಚೀನಾದೊಂದಿಗಿನ ಸಂಬಂಧವನ್ನು ಕಾಣಬಹುದು.
* ಭಾರತದಲ್ಲಿ ಉದಯಿಸಿದ ಬೌದ್ಧ ಧರ್ಮವು ಪ್ರಸ್ತುತ ಚೀನಾದಲ್ಲಿ ಪ್ರಸಾರಗೊಂಡಿರುವುದು.
* ಭಾರತದಲ್ಲಿನ ರಾಜರುಗಳು ಚೀನಾದ ಹಲವು ರಾಜ ವಂಶಗಳೊಂದಿಗೆ ಉತ್ತಮ ವ್ಯಾಪಾರ ಸಂಪರ್ಕಗಳನ್ನು ಹೊಂದಿದ್ದರು.
* ಭಾರತ ಮತ್ತು ಚೀನಾಗಳ ನಡುವಿನ ವ್ಯಾಪಾರ ಸಂಬಂಧವನ್ನು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಉಲ್ಲೇಖಿಸಲಾಗಿದೆ.
* ಈ ಅಂಶಗಳು ಭಾರತ ಮತ್ತು ಚೀನಾಗಳ ನಡುವಿನ ಪ್ರಾಚೀನ ಕಾಲದ ಸಂಬಂಧವನ್ನು ಪ್ರತಿಬಿಂಬಿಸುತ್ತವೆ.

**4. ಭಾರತ ಮತ್ತು ಚೀನಾ ನಡುವಿನ ಸಂಬಂದವನ್ನು ವಿವರಿಸಿ.**
* ಭಾರತ ಮತ್ತು ಚೀನಾ ದೇಶಗಳ ನಡುವಿನ ಸಂಬಂಧ ಸಿಂಧೂ ನಾಗರೀಕತೆಯ ಕಾಲದಿಂದಲೂ ಕಾಣಬಹುದು.
* ಪಂಚಶೀಲ ತತ್ವಗಳ ಮೂಲಕ ಸಂಬಂಧ ವೃದ್ಧಿಗೆ ಪ್ರಯತ್ನಿಸಲಾಗಿದೆ.
* ಟಿಬೆಟ್ ಆಕ್ರಮಣ ಮತ್ತು ಭಾರತದ ಮೇಲಿನ ಯುದ್ಧದಿಂದ ಸಂಬಂಧ ಹದಗೆಟ್ಟಿದೆ.
* ಗಡಿ ಸಮಸ್ಯೆ ಮತ್ತು ಚೀನಾ ಅರುಣಾಚಲ ಪ್ರದೇಶ ತನ್ನದೆನ್ನುತ್ತಿರುವುದು ಸಂಬಂಧಕ್ಕೆ ಧಕ್ಕೆಯಾಗಿದೆ.
* ಈ ಸಮಸ್ಯೆಗಳ ಹೊರತಾಗಿಯೂ ಎರಡು ದೇಶಗಳು ರಾಯಭಾರಿ ಸಂಬಂಧಗಳನ್ನು ಮುಂದುವರೆಸಿವೆ.
* 1980ರ ನಂತರ ದೊಡ್ಡಮಟ್ಟದ ವ್ಯಾಪಾರ ಸಂಪರ್ಕ ಬೆಳೆದಿದೆ.
* ಭಾರತ ಮತ್ತು ಚೀನಾ ದೇಶಗಳ ಪ್ರಯತ್ನದಿಂದ ಬ್ರಿಕ್ಸ್ ದೇಶಗಳ ಒಕ್ಕೂಟ ಅಸ್ತಿತ್ವಕ್ಕೆ ಬಂದಿದೆ.

**5. ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಗ್ನತೆಗೆ ಕಾರಣವಾದ ವಿಷಯಗಳು ಯಾವುವು?**
* ಜಮ್ಮು–ಕಾಶ್ಮೀರ ಸಮಸ್ಯೆ * ಭಯೋತ್ಪಾದನೆ
* ನೀರಿನ ಹಂಚಿಕೆ ವಿವಾದಗಳು * ಇಂಡೋ ಪಾಕ್ ಯುದ್ಧಗಳು

**6. ಮತ್ತು ಪಾಕಿಸ್ತಾನ ದೇಶಗಳ ನಡುವಿನ ಸಂಬಂಧವನ್ನು ವಿವರಿಸಿ.**
* ಪಾಕಿಸ್ತಾನ ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದ ಅವಿಭಾಜ್ಯ ಅಂಗವಾಗಿತ್ತು.
* 1947ರ ಭಾರತ ಸ್ವಾತಂತ್ರ್ಯ ಕಾಯಿದೆಯನ್ವಯ ಎರಡು ಪ್ರತ್ಯೇಕ ಸಾರ್ವಭೌಮ ರಾಷ್ಟ್ರಗಳಾಗಿ ರಚಿತವಾದವು.
* ಜಮ್ಮು–ಕಾಶ್ಮೀರ, ಭಯೋತ್ಪಾದನೆ, ನೀರಿನ ಹಂಚಿಕೆ ಮುಂತಾದ ಸಮಸ್ಯೆಗಳಿವೆ.
* ಎರಡು ರಾಷ್ಟ್ರಗಳ ನಡುವೆ ಮೂರು ಬಾರಿ ಯುದ್ಧಗಳು ನಡೆದಿವೆ.
* ತಾಷ್ಕೆಂಟ್ ಒಪ್ಪಂದ, ಸಿಮ್ಲಾ ಒಪ್ಪಂದ, ಲಾಹೋರ್ ಬಸ್ ಯಾತ್ರೆ, ಆಗ್ರಾ ಶೃಂಗಸಭೆಯಂತಹ ದ್ವಿಪಕ್ಷೀಯ ಮಾತುಕತೆಗಳನ್ನು ನಡೆಸಲಾಗಿದೆ.
* ಭಾರತ ಸಂಸತ್ತಿನ ಮೇಲಿನ ದಾಳಿ, ಪಠಾಣ್ ಕೋಟ್ ದಾಳಿಗಳು ಪರಸ್ಪರ ಸಂಬಂಧಗಳ ವೃದ್ಧಿಗೆ ಹಿನ್ನಡೆಯನ್ನು ಉಂಟುಮಾಡಿವೆ.
* ಎರಡು ರಾಷ್ಟಗಳ ನಡುವೆ ಸಂಸ್ಕೃತಿ ಮತ್ತು ಆರ್ಥಿಕ ವಿಷಯಗಳಲ್ಲಿ ಪರಸ್ಪರ ವಿನಿಮಯ ಕಾರ್ಯಗಳನ್ನು ಮುಂದುವರೆಸಿವೆ.

**7. ರಷ್ಯಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.**
* ಭಾರತ ಮತ್ತು ರಷ್ಯಾ ದೇಶಗಳ ನಡುವಿನ ಸಂಬಂಧವು ಅತ್ಯಂತ ಸುಮಧುರವಾಗಿದೆ
* 1966ರ ತಾಷ್ಕೆಂಟ್‌ನಲ್ಲಿ ಭಾರತ–ಪಾಕಿಸ್ತಾನಗಳ ಮಧ್ಯೆ ಒಪ್ಪಂದಕ್ಕೆ ರಷ್ಯಾ ಸಹಕರಿಸಿತು.
* 1971ರಲ್ಲಿ 20ವರ್ಷಗಳ ಶಾಂತಿ, ಮೈತ್ರಿ ಹಾಗೂ ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದವು.
* ಚೀನಾ ಆಕ್ರಮಣವನ್ನು ಖಂಡಿಸಿತು.
* ಗೋವಾ ವಿಮೋಚನೆಯ ವೇಳೆ ಭಾರತವನ್ನು ಬೆಂಬಲಿಸಿತು.
* ಭಿಲಾಯ್ & ಭೋಕಾರೋ ಉಕ್ಕಿನ ಕಾರ್ಖಾನೆಗಳ ಸ್ಥಾಪನೆಗೆ ರಷ್ಯಾ ನೆರವು ನೀಡಿತು.
* ನಮ್ಮ ದೇಶದ ಕೈಗಾರಿಕೆ ಮತ್ತು ವಾಣಿಜ್ಯ ಬೆಳವಣಿಗೆಗೆ ರಷ್ಯಾ ಸಾಕಷ್ಟು ನೆರವು ನೀಡಿದೆ.
* ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಯಬೇಕೆಂದು ರಷ್ಯಾ ಪ್ರತಿಪಾದಿಸುತ್ತಿದೆ.

**8. ಭಾರತ ಮತ್ತು ಅಮೇರಿಕಾ ದೇಶಗಳು ಸಂಬಂಧ ವಿವರಿಸಿ.**
* ಅಮೇರಿಕಾ ಮತ್ತು ಭಾರತ ಪ್ರಪಂಚದ ಎರಡು ಬೃಹತ್ ಪ್ರಜಾತಂತ್ರ ರಾಷ್ಟ್ರಗಳಾಗಿವೆ.
* ಭಾರತದ ಪಂಚವಾರ್ಷಿಕ ಯೋಜನೆಗೆ ಅಮೇರಿಕಾ ಸಹಾಯ ಮಾಡಿದೆ
* ಭಯೋತ್ಪಾದನೆಯನ್ನು ಹತ್ತಿಕ್ಕುವಲ್ಲಿ ಸಮಾನ ಹಿತಾಸಕ್ತಿ ಹೊಂದಿವೆ.
* ವಿದೇಶಿ ವ್ಯಾಪಾರ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಉತ್ತಮ ಬಾಂಧವ್ಯ ಹೊಂದಿವೆ.
* ಬಾಹ್ಯಾಕಾಶ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಉತ್ತಮ ಬಾಂಧವ್ಯ ಹೊಂದಿವೆ.
* ಜಾಗತಿಕ ಶಾಂತಿ ಸ್ಥಾಪನೆಯಲ್ಲಿ ಎರಡೂ ರಾಷ್ಟ್ರಗಳು ಸಮಾನ ಧೋರಣೆ ಹೊಂದಿವೆ.

## ಸಮಾಜಶಾಸ್ತ್ರ

### 1. ಸಾಮಾಜಿಕ ಸ್ತರ ವಿನ್ಯಾಸ

**1. ಶಿಕ್ಷಣದಲ್ಲಿ ಸಮಾನತೆ ಅವಕಾಶ ಮಾಡಿಕೊಡುವ ನಮ್ಮ ಸಂವಿಧಾನ ವಿಧಿಗಳನ್ನು ವಿವರಿಸಿ.**
* 21ಎ ಶಿಕ್ಷಣ ಮೂಲಭೂತ ಹಕ್ಕು
* 29ನೇ ವಿಧಿ– ಅಲ್ಪಸಂಖ್ಯಾತರ ಸಾಂಸ್ಕೃತಿಕ ಹಕ್ಕುಗಳಿಗೆ ರಕ್ಷಣೆ
* 30ನೇ ವಿಧಿ–ಅಲ್ಪಸಂಖ್ಯಾತರ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ
* 45ನೇ ವಿಧಿ– 6 ರಿಂದ 14ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ,
* 46ನೇ ವಿಧಿ– ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಶೈಕ್ಷಣಿಕ ಆಸಕ್ತಿಗಳಿಗೆ ಬೆಂಬಲ.
* 86ನೇ ತಿದ್ದುಪಡಿ– ಶಿಕ್ಷಣ ಮೂಲಭೂತ ಹಕ್ಕಾಗಿ ಸೇರ್ಪಡೆ.

**2. ಸಾಮಾಜಿಕ ಸ್ಥರ ವಿನ್ಯಾಸದ ಲಕ್ಷಣಗಳಾವುವು?**
* ಸಾಮಾಜಿಕ ಸ್ಥರ ವಿನ್ಯಾಸ ಸಮಾಜಿಕವಾದದ್ದು,
* ಸಾಮಾಜಿಕ ಸ್ಥರ ವಿನ್ಯಾಸ ಸರ್ವವ್ಯಾಪಕವಾದದ್ದು
* ಸಾಮಾಜಿಕ ಸ್ಥರ ವಿನ್ಯಾಸ ಪುರಾತನವಾದದ್ದು
* ಸಾಮಾಜಿಕ ಸ್ಥರ ವಿನ್ಯಾಸ ವಿವಿಧ ರೂಪಗಳಲ್ಲಿದೆ. * ಜನರನ್ನು ಸ್ತರಗಳಾಗಿ ವರ್ಗೀಕರಿಸುವುದು
* ಸಾಮಾಜಿಕ ಅಂಶಗಳಿಂದ ರೂಪುಗೊಳ್ಳುವುದು.

**3. ಅಸ್ಪೃಷ್ಯತೆ ಒಂದು ಸಾಮಾಜಿಕ ಪಿಡು ಚರ್ಚಿಸಿ.**
* ಅಸ್ಪೃಶ್ಯರಿಗೆ ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಕೆಳಮಟ್ಟದ ಸ್ಥಾನವನ್ನು ನೀಡಲಾಗಿತ್ತು.
* ಅವರನ್ನು ಶೈಕ್ಷಣಿಕ ಅವಕಾಶಗಳಿಂದ ದೂರವಿಡಲಾಗಿತ್ತು.
* ಅವರಿಗೆ ಆಸ್ತಿಯ ಒಡೆತನದ ಹಕ್ಕನ್ನು ನಿರಾಕರಿಸಲಾಗಿತ್ತು.
* ಅವರಿಗೆ ರಾಜಕೀಯ ಭಾಗವಹಿಸುವಿಕೆಯನ್ನು ನಿರಾಕರಿಸಲಾಗಿತ್ತು.
* ಅವರಿಗೆ ಮಾನವ ಹಕ್ಕುಗಳನ್ನು ನಿರಾಕರಿಸಲಾಗಿತ್ತು.
* ಅವರ ಸಾಮಾಜಿಕ ಚಲನೆಯನ್ನು ನಿಯಂತ್ರಿಸಲಾಗಿತ್ತು.

**4. ಅಸ್ಪೃಷ್ಯತೆ ನಿವಾರಣೆಯ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವುವು?**
* ಸಂವಿಧಾನದ 17ನೇ ವಿಧಿ ಅಸ್ಪೃಷ್ಯತೆಯನ್ನು ನಿಷೇಧಿಸಿದೆ.
* 1955ರಲ್ಲಿ ಅಸ್ಪೃಷ್ಯತೆ ಅಪರಾಧಗಳ ಕಾಯ್ದೆಯನ್ನು ಜಾರಿಗೆ ತರಲಾಗಿದೆ.
* 1976ರಲ್ಲಿ ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆಯನ್ನು ಜಾರಿಗೆ ತರಲಾಗಿದೆ.
* ಸಾರ್ವತ್ರಿಕ ಮತದಾನದ ಹಕ್ಕನ್ನು ನೀಡಲಾಗಿದೆ.
* ಸಮಾನತೆಯ ಹಕ್ಕನ್ನು ನೀಡಲಾಗಿದೆ.
* ಶೈಕ್ಷಣಿಕ ಮೀಸಲಾತಿಯನ್ನಿ ನೀಡಲಾಗಿದೆ.
* ಉದ್ಯೋಗದಲ್ಲಿ ಮೀಸಲಾತಿಯನ್ನು ನೀಡಲಾಗಿದೆ.
* ರಾಜ್ಯಗಳಿಗೆ ವಿಶೇಷ ಜವಾಬ್ದಾರಿಯನ್ನು ನೀಡಲಾಗಿದೆ.

**5. ಕಾರ್ಲ್‌ಮಾರ್ಕ್ಸ‌ರ ದೃಷ್ಟಿಕೋನದ ಹಿನ್ನಲೆಯಲ್ಲಿ ಶ್ರಮ ವಿಭಜನೆಯನ್ನು ವಿವರಿಸಿ.**

* ಕಾರ್ಲ್‌ಮಾರ್ಕ್ಸ್‌ರು ಶ್ರಮ ವಿಭಜನೆಯು ಕಡಿಮೆ ಕೌಶಲ್ಯವಿರುವ ಕೆಲಸಗಾರರನ್ನು ನಿರ್ಮಿಸುತ್ತದೆ ಎಂದು ಹೇಳುತ್ತಾರೆ.
* ಅವರು ಶ್ರಮ ವಿಭಜನೆಯನ್ನು ಆರ್ಥಿಕ ಶ್ರಮ ವಿಭಜನೆ ಮತ್ತು ಸಾಮಾಜಿಕ ಶ್ರಮ ವಿಭಜನೆ ಎಂದು ಪ್ರತ್ಯೇಕಿಸುತ್ತಾರೆ.
* ಆರ್ಥಿಕ ಶ್ರಮ ವಿಭಜನೆಯು ತಾಂತ್ರಿಕ ಅಂಶಗಳ ಜೊತೆಗೆ, ಕಾರ್ಮಿಕರ ಸಹಕಾರದಿಂದ ಹೆಚ್ಚಾಗಿ ನಡೆಯುತ್ತದೆ ಎಂದು ಹೇಳುತ್ತಾರೆ.
* ಸಾಮಾಜಿಕ ಶ್ರಮ ವಿಭಜನೆಯು ವರ್ಗ, ಸ್ಥಾನ ಮತ್ತು ವರ್ಣ-ಶ್ರೇಣಿಯ ಮೂಲಕ ಸಾಮಾಜಿಕ ನಿಯಂತ್ರಣವನ್ನು ಸಾಧಿಸುತ್ತಿರುತ್ತದೆ ಎಂದಿದ್ದಾರೆ.

**6. ದುಡಿಮೆಯ ತಾರತಮ್ಯತೆಯನ್ನು ವಿವರಿಸಿ.**

* ಮಹಿಳೆ ಮತ್ತು ಪುರುಷರಿಬ್ಬರೂ ಒಂದು ದುಡಿಮೆಯಲ್ಲಿ ತೊಡಗಿದರೂ ಅವರಿಗೆ ದೊರಕುವ ಸಂಭಾವನೆ ಸಮಾನವಾಗಿರುವುದಿಲ್ಲ.
* ಭಾರತದಲ್ಲಿ ಪುರುಷರಿಗೆ ಉತ್ತಮ ಸ್ವರೂಪದ ಉದ್ಯೋಗಗಳನ್ನು ನೀಡಲಾಗುತ್ತಿದೆ.
* ಪುರುಷರಿಗೆ ಹೆಚ್ಚಿನ ಸಂಬಳವನ್ನೂ, ಮಹಿಳೆಯರಿಗೆ ಕಡಿಮೆ ಸಂಬಳವನ್ನು ನೀಡಲಾಗುತ್ತದೆ.
* ಸರ್ಕಾರಿ ವಲಯದ ಶ್ರೇಣಿಕೃತ ದುಡಿಮೆಯಲ್ಲಿ ಅಸಮಾನತೆ ಕಾಣಬಹುದು.
* ಖಾಸಗಿ ವಲಯದಲ್ಲಿ ದುಡಿಮೆಯ ಅಸಮಾನತೆಯನ್ನು ಹೆಚ್ಚಾಗಿ ಕಾಣಬಹುದು.
* ಕೃಷಿ ವಲಯದ ದುಡಿಮೆಯು ಲಿಂಗ, ವಯಸ್ಸು, ಸಾಮರ್ಥ್ಯಗಳ ಆಧಾರದ ಮೇಲೆ ಕೆಲಸ ಕಾರ್ಯಗಳನ್ನು ಅಸಮಾನ ರೀತಿಯಲ್ಲಿ ಹಂಚಿಕೆ ಮಾಡುತ್ತದೆ.
* ದುಡಿಮೆಯಲ್ಲಿನ ಅಸಮಾನತೆಯು ವರ್ಗ, ಆದಾಯ, ಸಂಭಾವನೆ, ಲಿಂಗ, ಪ್ರದೇಶ, ಜಾತಿ ಮತ್ತು ಧರ್ಮ ಮೊದಲಾದವುಗಳಿಂದ ಪ್ರಭಾವಿತಗೊಂಡಿರುತ್ತದೆ.

**7. ಸಂಭಾವನೆ ರಹಿತ ದುಡಿಮೆ ಎಂದರೇನು? ಉದಾಹರಣೆ ಸಹಿತ ವಿವರಿಸಿ.**

* ಯಾವುದೇ ರೀತಿಯ ಸಂಭಾವನೆ ಅಥವಾ ವಸ್ತುಗಳ ರೂಪದ ಪ್ರತಿಫಲ ಇಲ್ಲದ ದುಡಿಮೆಯ ಚಟುವಟಿಕೆಗೆ ಸಂಭಾವನೆ ರಹಿತ ದುಡಿಮೆ ಎಂದು ಕರೆಯಲಾಗುತ್ತದೆ.
* ಸಂಭಾವನೆ ರಹಿತ ದುಡಿಮೆಯಲ್ಲಿ ದುಡಿಮೆಗಾರರು ಯಾವುದೇ ಸಂಭಾವನೆಯನ್ನು ಪಡೆಯುವುದಿಲ್ಲ ಅಥವಾ ನೀಡಲಾಗುವುದಿಲ್ಲ.
* ಈ ರೀತಿಯ ದುಡಿಮೆಯು ಕುಟುಂಬದ ಸದಸ್ಯರ ಒಳಗೆ, ಸಹಕಾರದ ಮೂಲಕ, ಕೆಲವು ಸಮಯದಲ್ಲಿ ಒತ್ತಾಯದ ಮೂಲಕ, ಕೆಲವೊಮ್ಮೆ ಸ್ವಯಂ ಪ್ರೇರಣೆಯಿಂದ, ಪ್ರೀತಿಯಿಂದ ಮಾಡುವ ದುಡಿಮೆಯಾಗಿದೆ. ಉದಾಹರಣೆಗೆ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಲ್ಲಿ ಸ್ಕೌಟ್ಸ್ ಆಂಡ್ ಗೈಡ್ಸ್‌ನಲ್ಲಿ, ರಾಷ್ಟ್ರೀಯ ಸೇವಾ ಯೋಜನೆ ಇನ್ನೂ ಮುಂತಾದ ಶ್ರಮ ಆಧಾರಿತ ಚಟುವಟಿಕೆಗಳಲ್ಲಿ ತೊಡಗುವುದು.
* ಅದೇ ರೀತಿ ಮಹಿಳೆಯರ ಕೌಟುಂಬಿಕ ದುಡಿಮೆಯು ಸಂಭಾವನೆ ರಹಿತ ದುಡಿಮೆಗೆ ಉದಾಹರಣೆಯಾಗಿದೆ.

**8. ಸಂಭಾವನೆ ಸಹಿತ ದುಡಿಮೆ ಎಂದರೇನು? ಉದಾಹರಣೆ ಸಹಿತ ವಿವರಿಸಿ.**

* ನಿಗದಿತ ಸಂಭಾವನೆಗಾಗಿ ಮಾಡುವ ದುಡಿಮೆಯ ಚಟುವಟಿಕೆಗೆ ಸಂಭಾವನೆ ಸಹಿತ ದುಡಿಮೆ ಎಂದು ಕರೆಯಲಾಗುತ್ತದೆ.
* ವ್ಯಕ್ತಿ ತನ್ನ ಶ್ರಮಕ್ಕೆ ಪ್ರತಿಫಲವಾಗಿ ಸಂಭಾವನೆವನ್ನು ಪಡೆಯುತ್ತಾನೆ.
* ಸಂಭಾವನೆಯನ್ನು ಘಂಟೆ, ದಿನ, ವಾರ, ತಿಂಗಳ ಆಧಾರದಲ್ಲಿ ನೀಡಲಾಗುತ್ತದೆ.
* ಉದಾಹರಣೆಗೆ ಹೊಲ ಗದ್ದೆಗಳಲ್ಲಿನ ದುಡಿಮೆ, ಕೈಗಾರಿಕೆಗಳ ದುಡಿಮೆ, ಶಾಲೆಯಲ್ಲಿ ಶಿಕ್ಷಕರಾಗಿ ದುಡಿಮೆ, ಕಟ್ಟಡ ಕಟ್ಟುವುದು ಇತ್ಯಾದಿ.
* ಸಂಭಾವನೆ ನೀಡಿಕೆಯು ಕೆಲಸ ನೀಡುವವರು ಮತ್ತು ದುಡಿಮೆದಾರರ ನಡುವಿನ ಒಪ್ಪಂದದಂತೆ ನಡೆಯುತ್ತದೆ.

**9. ಸಂಘಟಿತ ವಲಯ ದುಡಿಮೆಗಾರರ ಲಕ್ಷಣಗಳೇನು?**

* ಕಾನೂನಿನ ಚೌಕಟ್ಟು * ನಿಗದಿತ ಕೆಲಸ * ಉದ್ಯೋಗ ಭರವಸೆ ನಿಗದಿತ ವೇತನ * ಉದ್ಯೋಗ ಭದ್ರತೆ * ಸಾಮಾಜಿಕ ಭದ್ರತೆ

**10. ಸಂಘಟಿತ ವಲಯದಲ್ಲಿ ದುಡಿಮೆ(ಉದ್ದಿಮೆ) ಪ್ರಾರಂಭಿಸಲು ಅನುಸರಿಸಬೇಕಾದ ನಿಯಮಗಳೇನು?**

* ಕಾನೂನಿನಂತೆ ಸರ್ಕಾರದ ಅನುಮತಿ ಪಡೆಯುವುದು.
* ಕಡ್ಡಾಯವಾಗಿ ತೆರಿಗೆಯನ್ನು ಪಾವತಿಸುವುದು.
* ಕಾರ್ಮಿಕ ವರ್ಗಕ್ಕೆ ಉದ್ಯೋಗ ಭದ್ರತೆ ನೀಡುವುದು.
* ಕಾರ್ಮಿಕರಿಗೆ ಸಂಚಿತ ಸೌಲಭ್ಯಗಳನ್ನು ನೀಡುವುದು.
* ವೇತನದ ಜೊತೆಗೆ ವಾರ್ಷಿಕ ಭತ್ಯೆ ನೀಡುವುದು.
* ಹೆಚ್ಚಿನ ಅವಧಿಯ ದುಡಿಮೆಗೆ ಹೆಚ್ಚುವರಿ ವೇತನವನ್ನು ನೀಡುವುದು.

**11. ಅಸಂಘಟಿತ ದುಡಿಮೆಗಾರ ಲಕ್ಷಣ(ಸಮಸ್ಯೆ)ಗಳನ್ನು ಪಟ್ಟಿ ಮಾಡಿರಿ.**

* ಕಾನೂನಿನ ನಿಯಂತ್ರಣವಿಲ್ಲ.
* ಉದ್ಯೋಗದ ಭದ್ರತೆ ಇರುವುದಿಲ್ಲ.
* ನಿಗದಿತ ವೇತನ ಮತ್ತು ವಿಶೇಷ ಭತ್ಯೆಗಳಿರುವುದಿಲ್ಲ.
* ಸಾಮಾಜಿಕ ಭದ್ರತೆ ಇರುವುದಿಲ್ಲ.
* ವಿಶ್ರಾಂತಿ ಮತ್ತು ವೈದ್ಯಕೀಯ ಸೌಲಭ್ಯಗಳಿರುವುದಿಲ್ಲ.
* ಮಾಲೀಕರು ನಿರಂತರ ದೌರ್ಜನ್ಯ.

**12. ಅಸಂಘಟಿತ ದುಡಿಮೆಗಾರರು ಎದುರಿಸುತ್ತಿರುವ ಸಾಮಾಜಿಕ ಭದ್ರತೆಯ ಸವಾಲುಗಳನ್ನು ವಿವರಿಸಿ.**

* ವಲಸೆ * ಸಾಮಾಜಿಕ ಭದ್ರತೆ * ಕಾನೂನು ಚೌಕಟ್ಟು
* ಬಾಲ ಕಾರ್ಮಿಕರು * ದೈಹಿಕ ಮತ್ತು ಮಾನಸಿಕ ದೌರ್ಜನ್ಯ

**13. ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳೇನು?**

| ಸಂಘಟಿತ ಕೆಲಸಗಾರರು | ಅಸಂಘಟಿತ ಕೆಲಸಗಾರರು |
|---|---|
| * ಕಾನೂನಿನ ನಿಯಂತ್ರಣಕ್ಕೆ ಒಳಪಟ್ಟಿರುತ್ತಾರೆ.<br>* ನಿಗದಿತ ಕೆಲಸದಲ್ಲಿ ತೊಡಗಿರುತ್ತಾರೆ.<br>* ಉದ್ಯೋಗದ ಭದ್ರತೆ ಇರುತ್ತದೆ.<br>* ತೆರಿಗೆ ವ್ಯಾಪ್ತಿಗೆ ಒಳಪಟ್ಟಿರುತ್ತಾರೆ | * ಕಾನೂನಿನ ನಿಯಂತ್ರಣಕ್ಕೆ ಒಳಪಡುವುದಿಲ್ಲ.<br>* ವಿವಿಧ ಕೆಲಸಗಳಲ್ಲಿ ತೊಡಗಿರುತ್ತಾರೆ.<br>* ಯಾವುದೇ ಉದ್ಯೋಗದ ಭದ್ರತೆ ಇರುವುದಿಲ್ಲ.<br>* ತೆರಿಗೆ ವ್ಯಾಪ್ತಿಗೆ ಒಳಪಡುವುದಿಲ್ಲ. |

## ಭೂಗೋಳ

## 1. ಭಾರತದ ಭೂ ಸಂಪನ್ಮೂಲಗಳು

**1. ಭಾರತದಲ್ಲಿ ರೂಢಿಯಲ್ಲಿರುವ ವಿವಿಧ ಕೃಷಿ ವಿಧಾನ ಗಳನ್ನು ಪಟ್ಟಿ ಮಾಡಿರಿ.**

* ಭಾರತದಲ್ಲಿ ರೂಢಿಯಲ್ಲಿರುವ ವಿವಿಧ ಕೃಷಿ ಪದ್ಧತಿಗಳು

1. ಜೀವನಾಧಾರಿತ ಬೇಸಾಯ

ಎ) ವರ್ಗಾವಣೆ ಬೇಸಾಯ. ಬಿ) ಸ್ಥಿರ ಅಥವಾ ಸ್ಥಾಯಿ ಬೇಸಾಯ.

2. ಸಾಂದ್ರ ಬೇಸಾಯ 3. ವಾಣಿಜ್ಯ ಬೇಸಾಯ 4. ಮಿಶ್ರಣ ಬೇಸಾಯ
5. ನೆಡುತೋಪು ಬೇಸಾಯ 6. ಒಣಬೇಸಾಯ 7. ಆರ್ದ್ರ ಬೇಸಾಯ
8. ನೀರಾವರಿ ಬೇಸಾಯ

**2. ಭಾರತದಲ್ಲಿಯ ಭೂಬಳಕೆಯ ( 7 ಮಾದರಿಯ ) ವಿಂಗಡಣೆ ಗಳನ್ನು ತಿಳಿಸಿರಿ.**

1. ನಿವ್ವಳ ಸಾಗುವಳಿ ಭೂಮಿ. 2. ಅರಣ್ಯ ಪ್ರದೇಶ . 3. ಕೃಷಿಗಾಗಿ ದೊರೆಯದ ಪ್ರದೇಶ. 4. ಪಾಳು ಭೂಮಿ. 5. ಬಳಕೆಯಾಗದ ಕೃಷಿ ಯೋಗ್ಯ ಭೂಮಿ. 6. ಖಾಯಂ ಹುಲ್ಲುಗಾವಲು ಮತ್ತು ಗೋಮಾಳ . 7. ಇತರೆ

**3. ಭಾರತದಲ್ಲಿ ಕೃಷಿಯ ಪ್ರಾಮುಖ್ಯತೆಯನ್ನು ತಿಳಿಸಿ**

* ವ್ಯವಸಾಯವು ಮಾನವನ ಅತ್ಯಂತ ಪ್ರಮುಖ ಹಾಗೂ ಪ್ರಾಚೀನ ವೃತ್ತಿಗಳಲ್ಲಿ ಒಂದಾಗಿದೆ.
* ಭಾರತವು ಒಂದು ಕೃಷಿಪ್ರಧಾನ ದೇಶವಾಗಿದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 65 ಭಾಗವು ಕೃಷಿಯನ್ನು ಆದರಿಸಿದೆ.
* ದೇಶದ ಆರ್ಥಿಕಾಭಿವೃದ್ಧಿಯು ಕೃಷಿಯ ಪ್ರಗತಿಯನ್ನಾಧರಿಸಿದೆ.
* ಭಾರತದಲ್ಲಿ ಕೃಷಿಯ ಜೀವನಾಧಾರದ ಮೂಲವಾಗಿದೆ.
* ಜನರು ಮತ್ತು ಜಾನುವಾರುಗಳಿಗೆ ಅಗತ್ಯವಾದ ಆಹಾರವನ್ನು ಪೂರೈಸುವ ವೃತ್ತಿ.
* ರಾಷ್ಟ್ರೀಯ ಆದಾಯದ ಮೂಲ ಆಕರವಾಗಿದೆ.
* ದೇಶದ ತೃತೀಯ ವೃತ್ತಿಗಳಾದ ಸಾರಿಗೆ, ವ್ಯಾಪಾರ, ಬ್ಯಾಂಕಿಂಗ್, ವಿಮೆ, ರಫ್ತು ಮುಂತಾದವುಗಳಿಗೆ ನೆರವಾಗಿದೆ.
* ಕೃಷಿಯು ಹಲವಾರು ಕೈಗಾರಿಕೆಗಳ ಪ್ರಗತಿಗೂ ನೆರವಾಗಿದೆ.
  ಉದಾಹರಣೆಗೆ : ಹತ್ತಿ ಮತ್ತು ಸೆಣಬು – ಜವಳಿ. ಕಬ್ಬು – ಸಕ್ಕರೆ ಕಾರ್ಖಾನೆ.
* ದೇಶದ ರಾಜಕೀಯ ಹಾಗೂ ಸಾಮಾಜಿಕ ಪ್ರಗತಿಯ ಮೇಲೆ ಪ್ರಭಾವ ಬೀರುತ್ತದೆ.

4. **ಬೆಳೆಯಿಡುವ ಮಾದರಿ ಎಂದರೇನು ? ಅದಕ್ಕೆ ಪ್ರಮುಖ ಕಾರಣ ಗಳನ್ನು ತಿಳಿಸಿರಿ.**

* ಒಂದು ನಿರ್ದಿಷ್ಟ ಅವಧಿಯಲ್ಲಿ ವಿವಿಧ ಬೆಳೆಗಳಿಂದ ಆವರಿಸಿರುವ ಪ್ರದೇಶದ ಅನುಪಾತವನ್ನು ಬೆಳೆಯಿಡುವ ಮಾದರಿ ಎನ್ನುವರು.
* ಅದಕ್ಕೆ ಪ್ರಮುಖ ಕಾರಣ ಗಳೆಂದರೆ – ಮೇಲ್ಮೈ ಲಕ್ಷಣ , ಮಣ್ಣು, ವಾಯುಗುಣ , ಭೂ ಹಿಡುವಳಿಯ ಗಾತ್ರ , ನೀರಿನ ಪೂರೈಕೆ , ರೈತರ ಆರ್ಥಿಕ ಪರಿಸ್ಥಿತಿ , ತಂತ್ರಜ್ಞಾನ ಇತ್ಯಾದಿ....

5. **ಭಾರತದಲ್ಲಿ ಕಬ್ಬು ಬೆಳೆಯಲು ಬೇಕಾದ ಭೌಗೋಳಿಕ ಹಾಗೂ ವಾಯುಗುಣದ ಅಂಶಗಳನ್ನು ಪಟ್ಟಿಮಾಡಿ.**

* ಕಬ್ಬು ಭಾರತದ ಪ್ರಮುಖ ವಾಣಿಜ್ಯ ಬೆಳೆ.
* ಕಬ್ಬು ಪ್ರಮುಖ ವಾರ್ಷಿಕ ಬೆಲೆಯೂ ಸಹ.
* ಬೇಸಾಯಕ್ಕೆ ನೀರಾವರಿ ಅತ್ಯವಶ್ಯಕ.
* ಇದಕ್ಕೆ ಅತ್ಯಧಿಕ ಉಷ್ಣಾಂಶ $21^\circ$ ಯಿಂದ $26^\circ$ ಸೆ. ಅಗತ್ಯ .
* ವಾರ್ಷಿಕ ಸರಾಸರಿ ಮಳೆ 100 ರಿಂದ 150 ಸೆ .ಮೀ .ಅವಶ್ಯಕ.
* ಮೆಕ್ಕಲು ಮತ್ತು ಜೇಡಿ ಮಿಶ್ರಿತ ಮರಳು ಮಣ್ಣು ಸೂಕ್ತವಾದುದು.

6. **ಭಾರತದಲ್ಲಿ ಭತ್ತ ಬೆಳೆಯಲು ಬೇಕಾದ ಭೌಗೋಳಿಕ ಹಾಗೂ ವಾಯುಗುಣದ ಅಂಶಗಳನ್ನು ತಿಳಿಸಿರಿ.**

* ಭತ್ತವು ಭಾರತದ ಅತ್ಯಂತ ಪ್ರಮುಖವಾದ ಆಹಾರದ ಬೆಳೆ.
* ಭತ್ತವು ಪ್ರಮುಖ ಉಷ್ಣವಲಯದ ಬೆಳೆಯಾಗಿದೆ.
* ಭತ್ತವು ಪ್ರಮುಖ ಖಾರೀಫ್ ಬೆಳೆಯಾಗಿದೆ.
* ಈ ಬೆಳೆಗೆ $18^\circ$ ರಿಂದ $25^\circ$ ಸೆ ಅಧಿಕ ಉಷ್ಣಾಂಶ ಅವಶ್ಯಕ.
* ವಾರ್ಷಿಕ 100 ರಿಂದ 200 ಸೆಂ. ಮೀ. ಮಳೆ ಅಗತ್ಯ.
* ಮೆಕ್ಕಲು, ಜೇಡಿ ಮತ್ತು ಜೇಡಿ ಮಿಶ್ರಿತ ಮರಳು ಮಣ್ಣು ಈ ಬೆಳೆಗೆ ಬಹು ಸೂಕ್ತ .
* ಭತ್ತದ ಗಿಡದ ತಳದಲ್ಲಿ ನೀರು ನಿಂತಿರಬೇಕು. ಹೀಗಾಗಿ ಭೂಮಿ ಸಮತಟ್ಟಾಗಿರಬೇಕು.
* ಕಡಿಮೆ ಮಳೆ ಬೀಳುವ ಕಡೆ ನೀರಾವರಿ ಅವಶ್ಯಕ.

7. **ಭಾರತದಲ್ಲಿ ಗೋಧಿ ಬೆಳೆಯಲು ಬೇಕಾದ ಭೌಗೋಳಿಕ ವಾಯುಗುಣದ ಅಂಶಗಳನ್ನು ತಿಳಿಸಿರಿ.**

* ಗೋಧಿಯು ಭಾರತದ ಪ್ರಮುಖವಾದ ಎರಡನೇ ಆಹಾರದ ಬೆಳೆ.
* ಇದು ಪ್ರಮುಖವಾದ ಹಿಂಗಾರು ಬೆಳೆ ( ರಬಿ ಬೆಳೆ ).
* ಗೋಧಿ ಸಮಶೀತೋಷ್ಣವಲಯದ ಬೆಳೆ.
* ಇದರ ಬೇಸಾಯಕ್ಕೆ $10^\circ$ ಯಿಂದ $15^\circ$ ಸೆ ಉಷ್ಣಾಂಶ ಬೇಕು.
* ವಾರ್ಷಿಕ ಮಳೆ 50 ರಿಂದ 70 ಸೆಂ. ಮೀ. ಬೇಕು.
* ಮರಳು ಮಿಶ್ರಿತ ಮತ್ತು ಕಪ್ಪು ಮಣ್ಣು ಈ ಬೆಳೆಗೆ ಸೂಕ್ತ ವಾದವು. * ಗೋಧಿಯ ಗಿಡದ ತಳದಲ್ಲಿ ನೀರು ನಿಲ್ಲುವ ಅವಶ್ಯಕತೆ ಇಲ್ಲ.

## 2. ಭಾರತದ ಸಾರಿಗೆ ಮತ್ತು ಸಂಪರ್ಕ

1. **ಸಾರಿಗೆಯ ಮಹತ್ವವನ್ನು ವಿವರಿಸಿ.**

* ಸಾರಿಗೆ ಸೌಲಭ್ಯ ದರದಲ್ಲಿ ದೊರೆಯುತ್ತದೆ.
* ಕೃಷಿಯ ಅಭಿವೃದ್ಧಿಗೆ ಸಹಕಾರಿಯಾಗಿದೆ.
* ಕೈಗಾರಿಕಾ ಪ್ರಗತಿಗೆ ಉತ್ತೇಜನ ನೀಡುತ್ತದೆ
* ಮಾರುಕಟ್ಟೆ ವಿಸ್ತರಣೆಗೆ ಸಹಕಾರಿ
* ದೇಶೀಯ ಮತ್ತು ವಿದೇಶಿಯ ವ್ಯಾಪಾರ ವೃದ್ಧಿ
* ಉದ್ಯೋಗ ಸೃಷ್ಟಿ * ಆದಾಯ ಹೆಚ್ಚಳ
* ಜೀವನ ಮಟ್ಟ ಸುಧಾರಣೆ * ಪ್ರವಾಸೋದ್ಯಮ ಅಭಿವೃದ್ಧಿ
* ರಕ್ಷಣಾ ಪಡೆಗೆ ಸಹಕಾರಿ

2. **ರಸ್ತೆ ಸಾರಿಗೆಯ ಪ್ರಯೋಜನಗಳಾವುವು?**

* ಪ್ರಾಚೀನ ಹಾಗೂ ಸಾರ್ವತ್ರಿಕ ಸಾರಿಗೆ ಮಾಧ್ಯಮ
* ಪಟ್ಟಣ ಮತ್ತು ನಗರಗಳೊಂದಿಗೆ ಸಂಪರ್ಕ ಕಲ್ಪಿಸುತ್ತದೆ.
* ಮನೆ ಮನೆಗೆ ಸೇವೆ ಕಲ್ಪಿಸುತ್ತದೆ.
* ರೈಲು, ಬಂದರು ಮತ್ತು ವಿಮಾನ ನಿಲ್ದಾಣಗಳಿಗೆ ಸಂಪರ್ಕ ಕಲ್ಪಿಸುತ್ತವೆ.
* ಪ್ರವಾಸೋದ್ಯಮಕ್ಕೆ ಸಹಕಾರಿ.
* ವ್ಯಾಪಾರ ಮತ್ತು ವಾಣಿಜ್ಯಾಭಿವೃದ್ಧಿಗೆ ನೆರವಾಗುತ್ತದೆ.
* ಉದ್ಯೋಗಾವಕಾಶ ಕಲ್ಪಿಸುತ್ತದೆ.
* ಗಡಿಪ್ರದೇಶಗಳಲ್ಲಿ ಹೆಚ್ಚು ಉಪಯುಕ್ತ.

3. **ಆರ್ಥಿಕಾಭಿವೃದ್ಧಿಯಲ್ಲಿ ಸುವರ್ಣ ಚತುಷ್ಕೋನ ಮತ್ತು ಸೂಪರ್ ಹೆದ್ದಾರಿಗಳ ಪಾತ್ರ ತಿಳಿಸಿ.**

**ಸುವರ್ಣ ಚತುಷ್ಕೋನ ಹೆದ್ದಾರಿಗಳು**

* ನಾಲ್ಕರಿಂದ ಆರು ಪಥಗಳ ಉತ್ತಮ ರಸ್ತೆಗಳ ರಚನಾ ಯೋಜನೆ
* 1999ರಲ್ಲಿ ಆರಂಭವಾಯಿತು.
* ದೇಶದ ಪ್ರಮುಖ ನಗರ, ಸಾಂಸ್ಕೃತಿಕ ಮತ್ತು ಕೈಗಾರಿಕಾ ಕೇಂದ್ರಗಳನ್ನು ಸಂಪರ್ಕಿಸುತ್ತದೆ.

**ಸೂಪರ್ ಹೆದ್ದಾರಿಗಳು**

* ಸೂಪರ್ ಹೆದ್ದಾರಿಯನ್ನು ಉತ್ತರ ದಕ್ಷಿಣ ಕಾರಿಡಾರ್ ಮತ್ತು ಪೂರ್ವ ಪಶ್ಚಿಮ ಕಾರಿಡಾರ್ ಎಂದು ಎರಡು ಭಾಗಗಳಾಗಿ ವಿಂಗಡಿಸಿದೆ.
* ಇವು ಅನೇಕ ಪ್ರಮುಖ ನಗರ, ಕೈಗಾರಿಕಾ ಕೇಂದ್ರಗಳು ಮತ್ತು ಬಂದರುಗಳನ್ನು ಸಂಪರ್ಕಿಸುತ್ತವೆ.
* ಇವುಗಳ ನಿರ್ಮಾಣ ಮತ್ತು ನಿರ್ವಹಣಾ ಕಾರ್ಯವು ಕೇಂದ್ರ ಲೋಕೋಪಯೋಗಿ ಇಲಾಖೆ ಪ್ರಾಧಿಕಾರಕ್ಕೆ ಸೇರಿರುತ್ತದೆ.

4. **ಸಂಪರ್ಕ ಮಾಧ್ಯಮದ ಪ್ರಾಮುಖ್ಯತೆಯನ್ನು ವಿವರಿಸಿ.**

* ಸರ್ಕಾರದ ನ್ತಿ ನಿಯಮ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಅರಿವು ಮೂಡಿಸುವುದು.
* ನೈಸರ್ಗಿಕ ವಿಪತ್ತು ಮತ್ತು ವಿನಾಶಗಳು, ಹವಾಗುಣ ಮುನ್ಸೂಚನೆ ತಿಳಿಯಲು ಸಹಕಾರಿ.
* ವ್ಯಾಪಾರ ವಾಣಿಜ್ಯ, ಕೈಗಾರಿಕೆ, ಕೃಷಿ ಇತ್ಯಾದಿಗಳ ಅಭಿವೃದ್ಧಿಗೆ ನೆರವಾಗುವುದು.
* ಮನರಂಜನೆ ಹಾಗೂ ಪ್ರಪಂಚದ ದಿನನಿತ್ಯದ ಮಾಹಿತಿಗಳನ್ನು ಪೂರೈಸುವುದು.
* ದೇಶದ ಏಕತೆ ಮತ್ತು ಸಮಗ್ರತೆ ನಿರ್ವಹಣೆಗೆ ನೆರವಾಗುವುದು.

## 3. ಭಾರತದ ಕೈಗಾರಿಕೆಗಳು

1. **ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಕೈಗಾರಿಕೆಗಳ ಪಾತ್ರ ತಿಳಿಸಿ.**

* ಪ್ರಾಥಮಿಕ ಸರಕುಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು.
* ದೇಶದ ಆಮದು ಕಡಿಮೆ ಮಾಡುವುದು. * ಉದ್ಯೋಗ ಸೃಷ್ಟಿ.
* ರಾಷ್ಟ್ರೀಯ ಆದಾಯ ಮತ್ತು ತಲಾದಾಯ ಹೆಚ್ಚಳ
* ವಿದೇಶಿ ವಿನಿಮಯ ಗಳಿಕೆ * ರಾಷ್ಟ್ರೀಯ ಉತ್ಪನ್ನ ಹೆಚ್ಚಳ. * ಜೀವನ ಮಟ್ಟ ಸುಧಾರಣೆ. * ಕೃಷಿಯ ಅಭಿವೃದ್ಧಿಗೆ ಸಹಕಾರ.

2. **ಕೈಗಾರಿಕಾ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?**

* ಕಚ್ಚಾ ವಸ್ತುಗಳ ಲಭ್ಯತೆ * ಶಕ್ತಿ ಸಂಪನ್ಮೂಲಗಳ ಪೂರೈಕೆ
* ಸಾರಿಗೆ ಮತ್ತು ಸಂಪರ್ಕದ ವ್ಯವಸ್ಥೆ * ಮಾರುಕಟ್ಟೆ ಸೌಲಭ್ಯ
* ಬಂಡವಾಳ ಪೂರೈಕೆ * ಕಾರ್ಮಿಕರ ಲಭ್ಯತೆ
* ಮೂಲಭೂತ ಸೌಕರ್ಯ * ಸೂಕ್ತ ವಾಯುಗುಣ
* ಸರ್ಕಾರದ ನೀತಿ ನಿಯಮಗಳು

3. **ಭಾರತದ ಪ್ರಮುಖ ಕೈಗಾರಿಕಾ ಪ್ರದೇಶಗಳನ್ನು ಪಟ್ಟಿ ಮಾಡಿರಿ.**

* ಹೂಗ್ಲಿ–ಕೊಲ್ಕತ್ತ ಪ್ರದೇಶ * ಮುಂಬಯಿ–ಪುಣೆ ಪ್ರದೇಶ
* ಅಹ್ಮದಾಬಾದ್–ವಡೋದರ ಪ್ರದೇಶ * ದೆಹಲಿ– ಮೀರತ್ ಪ್ರದೇಶ
* ಮಧುರೈ–ಕೊಯಮತ್ತೂರು– ಬೆಂಗಳೂರು ಪ್ರದೇಶ
* ಛೋಟಾನಾಗಪುರ ಪ್ರಸ್ಥಭೂಮಿ ಪ್ರದೇಶ
* ವಿಶಾಖಪಟ್ಟಣ– ಗುಂಟೂರು ಪ್ರದೇಶ
* ಕೊಲ್ಲಂ– ತಿರುವನಂತಪುರ ಪ್ರದೇಶ

4. **ಅಲ್ಯೂಮಿನಿಯಂ ಲೋಹದ ಉಪಯೋಗಗಳನ್ನು ತಿಳಿಸಿ.**

* ವಿಮಾನ ತಯಾರಿಕೆಯಲ್ಲಿ ಬಳಕೆ
* ಸ್ವಯಂಚಾಲಿತ ವಾಹನ ತಯಾರಿಕೆಯಲ್ಲಿ ಬಳಕೆ
* ಹಡಗು ತಯಾರಿಕೆಯಲ್ಲಿ ಬಳಕೆ * ಬಣ್ಣ ತಯಾರಿಕೆಯಲ್ಲಿ ಬಳಕೆ
* ಗೃಹಬಳಕೆ ವಸ್ತುಗಳ ತಯಾರಿಕೆಯಲ್ಲಿ ಬಳಕೆ.
* ವಿದ್ಯುತ್ ಕೇಬಲ್ ತಯಾರಿಕೆಯಲ್ಲಿ ಬಳಕೆ.
* ಪ್ಯಾಕಿಂಗ್ ಮಾಡಲು ಬಳಕೆ * ರೈಲು ಸಾರಿಗೆಯಲ್ಲಿ ಬಳಕೆ.

5. **ಜ್ಞಾನಾಧಾರಿತ ಕೈಗಾರಿಕೆಗಳ ಪ್ರಾಮುಖ್ಯತೆ ತಿಳಿಸಿ.**

* ಉದ್ಯೋಗ ಸೃಷ್ಟಿ * ಆಡಳಿತ ಸುಧಾರಣೆಗೆ ಸಹಕಾರಿಯಾಗಿದೆ.
* ವಿದೇಶಿ ವಿನಿಮಯ ಗಳಿಕೆ * ಆರ್ಥಿಕಾಭಿವೃದ್ಧಿಗೆ ಸಹಕಾರಿ.
* ತ್ವರಿತ ತಾಂತ್ರಿಕ ಮತ್ತು ವೈಜ್ಞಾನಿಕ ಬೆಳವಣಿಗೆಗೆ ಸಹಕಾರಿಯಾಗಿದೆ.
• ಮೂಲಭೂತ ಸೌಕರ್ಯಗಳ ವೃದ್ಧಿಗೆ ಸಹಕಾರಿಯಾಗಿದೆ.

## 4. ಭಾರತದ ನೈಸರ್ಗಿಕ ವಿಪತ್ತುಗಳು

1. **ನೈಸರ್ಗಿಕ ವಿಪತ್ತುಗಳನ್ನು ಪಟ್ಟಿ ಮಾಡಿರಿ.**

* ಭೂಕಂಪ * ಜ್ವಾಲಾಮುಖಿ * ಸುನಾಮಿ * ಭೂಕುಸಿತ
* ಹಿಮಪಾತಗಳು * ಆವರ್ತ ಮಾರುತಗಳು * ಬರಗಾಲ * ಪ್ರವಾಹ
* ಸಂಕ್ರಾಮಿಕ ಪಿಡುಗುಗಳು

2. **ಆವರ್ತ ಮಾರುತಗಳ ಸಂದರ್ಭಗಳಲ್ಲಿ ಕೈಗೊಳ್ಳಬಹುದಾದ ಮುನ್ನೆಚ್ಚರಿಕಾ ಕ್ರಮಗಳೇನು?**

* ಸಂಪರ್ಕ ಮಾಧ್ಯಮಗಳ ಮೂಲಕ ಮಾಹಿತಿ ಭಿತ್ತರಿಸುವುದು.
* ಆವರ್ತ ಮಾರುತಗಳು ಸಂಭವಿಸಿದ ಸಂದರ್ಭಗಳಲ್ಲಿ ಜನರಿಗೆ
* ತಾತ್ಕಾಲಿಕ ಆಶ್ರಯ ಕಲ್ಪಿಸುವುದು.
* ಆವರ್ತ ಮಾರುತಗಳ ಹೊಡೆತ ಮತ್ತು ಕಡಲಕೊರತಗಳನ್ನು ನಿಯಂತ್ರಿಸುವುದು.
* ಮಾಂಗ್ರೋವ್ ಕಾಡುಗಳನ್ನು ಸಮುದ್ರ ತೀರದಲ್ಲಿ ಬೆಳೆಸುವುದು.

3. **ಪ್ರವಾಹಗಳುಂಟಾಗುವುದಕ್ಕೆ ಕಾರಣಗಳನ್ನು ತಿಳಿಸಿ.**

**ನೈಸರ್ಗಿಕ ಕಾರಣಗಳು:** ಆತ್ಯಧಿಕ ಮಳೆ * ಹಿಮಕರಗುವಿಕೆ

* ಆವರ್ತ ಮಾರುತಗಳು * ಮೇಘಸ್ಫೋಟ
* ನದಿ ಸರಾಗವಾಗಿ ಹರಿಯಲಾರದಷ್ಟು ಅಡಚಣೆರ್
* ನದಿ ಪಾತ್ರದಲ್ಲಿ ಹೂಳು ತುಂಬುವಿಕೆ.

**ಮಾನವ ನಿರ್ಮಿತ ಕಾರಣಗಳು:** * ಅರಣ್ಯ ನಾಶ

* ಅವೈಜ್ಞಾನಿಕ ನೀರಾವರಿ ಮತ್ತು ಕೃಷಿ ಪದ್ಧತಿ, ಒಡ್ಡು ಮತ್ತು ಅಣೆಕಟ್ಟುಗಳು ಒಡೆದು ಹೋಗುವುದು
* ಶೀಘ್ರಗತಿಯ ನಗರೀಕರಣ.

4. **ಭೂಕುಸಿತಕ್ಕೆ ಕಾರಣಗಳನ್ನು ಪಟ್ಟಿ ಮಾಡಿರಿ.**

**ನೈಸರ್ಗಿಕ ಕಾರಣ:** * ಸಮುದ್ರ ಅಲೆಗಳ ಸವೆತ ಕಾರ್ಯ

* ಅತ್ಯಧಿಕ ಮಳೆ * ಭೂಕಂಪಗಳು

**ಮಾನವ ನಿರ್ಮಿಕ ಕಾರ್ಯ:** * ಅರಣ್ಯ ನಾಶ,

* ರೈಲು ಮತ್ತು ರಸ್ತೆಗಳ ನಿರ್ಮಾಣ,
* ಅಣೆಕಟ್ಟು ಮತ್ತು ಜಲವಿದ್ಯುತ್ ಯೋಜನೆಗಳ ನಿರ್ಮಾಣ,
* ತೀವ್ರಗತಿಯ ಗಣಿಗಾರಿಕೆ, * ಕಲ್ಲು ಗಣಿಗಾರಿಕೆ.

5. **ಭೂಕಂಪಕ್ಕೆ ಕಾರಣವಾಗುವ ಅಂಶಗಳಾವುವು?**

* ಭೂಫಲಕಗಳ ಚಲನೆ * ಜ್ವಾಲಾಮುಖಿ ಸ್ಫೋಟ
* ಶಿಲಾಸ್ತರಗಳ ಭಂಗ ಮತ್ತು ಮಡಿಕೆ * ಭೂಕುಸಿತ
* ಅಂತರ್ಗುಹೆ ಮೇಲ್ಛಾವಣಿಯ ಕುಸಿತ * ಜಲಾಶಯಗಳ ನೀರಿನ ಭಾರ.

6. **ನೈಸರ್ಗಿಕ ವಿಪತ್ತುಗಳಿಂದ (ಭೂಕಂಪ/ಪ್ರವಾಹ/ಸೈಕ್ಲೋನ್/ಭೂಕುಸಿತ) ಆಗುವ ದುಷ್ಪರಿಣಾಮಗಳಾವುವು?**

* ಜೀವ ಮತ್ತು ಆಸ್ತಿಗಳಿಗೆ ಹಾನಿ * ಕಟ್ಟಡಗಳಿಗೆ ಹಾನಿ
* ಸಾರಿಗೆ ಸಂಪರ್ಕ ಅಸ್ತವ್ಯಸ್ತ * ವಿದ್ಯುತ್ ಸರಬರಾಜಿಗೆ ಅಡಚಣೆ
* ಬೆಳೆಗಳು ನಾಶ * ಸ್ವಾಭಾವಿಕ ಸಸ್ಯವರ್ಗ ಹಾಗೂ ಪ್ರಾಣಿ ಸಂಕುಲಕ್ಕೆ ಹಾನಿ
* ಮೂಲ ಸೌಲಭ್ಯಾಗಳಲ್ಲಿ ವ್ಯತ್ಯಯ.

7. **ಭೂಕಂಪದ ಮುನ್ನೇಚ್ಚರಿಕಾ ಕ್ರಮಗಳನ್ನು ಪಟ್ಟಿ ಮಾಡಿ**

* ಭೂಕಂಪ ವಲಯಗಳಲ್ಲಿ ಜನವಸತಿಗಳ ನಿರ್ಮಾಣವನ್ನು ನಿಷೇಧಿಸುವುದು.
* ಭೂಕಂಪ ನಿರೋಧಕ ಕಟ್ಟಡಗಳ ನಿರ್ಮಾಣ
* ಭೂಕಂಪವಲಯದಲ್ಲಿ ಬಹುಮಹಡಿ ಕಟ್ಟಡ ನಿರ್ಮಾಣ ನಿಷೇಧ.
* ಬಾವಿಗಳ ಆಳ ಕೊರೆತವನ್ನು ನಿಷೇಧಿಸುವುದು.
* ಅಣೆಕಟ್ಟು ಮತ್ತು ಜಲಾಶಯಗಳ ನಿರ್ಮಾಣವನ್ನು ಕೈ ಬಿಡುವುದು.
* ಅರಣ್ಯ ನಾಶ ಮತ್ತು ತೀವ್ರ ಸ್ವರೂಪದ ಗಣಿಗಾರಿಕೆ ತಡೆಗಟ್ಟುವುದು.

# ಅರ್ಥಶಾಸ್ತ್ರ

## 1. ಗ್ರಾಮೀಣ ಅಭಿವೃದ್ಧಿ

1. **ಗ್ರಾಮೀಣ ಅಭಿವೃದ್ಧಿಯ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ?**

* ಕೃಷಿ ಹಾಗೂ ಕೃಷಿಯೇತರ ವಲಯಗಳ ಅಭಿವೃದ್ಧಿ
* ಅಧಿಕ ಕೃಷಿ ವರಮಾನ * ರಾಷ್ಟ್ರೀಯ ಉತ್ಪನ್ನ ಹೆಚ್ಚಳ
* ಔದ್ಯೋಗಿಕ ಸರಕು ಸೇವೆಗಳಿಗೆ ಬೇಡಿಕೆ ಹೆಚ್ಚಳ
* ಅಧಿಕ ಉದ್ಯೋಗ ಸೃಷ್ಟಿ * ಬಡತನ ಪ್ರಮಾಣ ಇಳಿಕೆ
* ಶಿಕ್ಷಣ ಮತ್ತು ಕೌಶಲ್ಯ ಗಳಿಂದಾಗಿ ಹೆಚ್ಚಿನ ಉತ್ಪಾದಕತೆ
* ಕೃಷಿ ಸಂಸ್ಕರಣೆ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿ

2. **ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ?**

* ಕೃಷಿ ಮತ್ತು ಹೈನುಗಾರಿಕೆಗೆ ಪ್ರಶಸ್ತಿ
* ನಶಿಸುತ್ತಿರುವ ಗೃಹ ಮತ್ತು ಸಣ್ಣ ಕೈಗಾರಿಕೆಗಳು
* ಬಡತನ ಮತ್ತು ನಿರುದ್ಯೋಗ * ನೈರ್ಮಲ್ಯದ ಕೊರತೆ
* ಅನಕ್ಷರತೆ ಮತ್ತು ಮೂಢನಂಬಿಕೆಗಳು
* ಮೂಲಭೂತ ಸೌಕರ್ಯಗಳ ಕೊರತೆ

3. **ಗ್ರಾಮೀಣ ಅಭಿವೃದ್ಧಿಗಾಗಿ ಇರುವ ಅವಶ್ಯಕ ಕ್ರಮಗಳಾವುವು?**

* ಮಾನವ ಸಂಪನ್ಮೂಲ ಅಭಿವೃದ್ಧಿ * ಭೂಸುಧಾರಣೆ
* ಮಹಿಳಾ ಸಾಕ್ಷರತೆ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ
* ನೈರ್ಮಲ್ಯ ಮತ್ತು ಸಾರ್ವಜನಿಕ ಆರೋಗ್ಯದ ಸುಧಾರಣೆ
* ಸ್ಥಳೀಯ ಉತ್ಪಾದಕ ಸಂಪನ್ಮೂಲಗಳ ಅಭಿವೃದ್ಧಿ
* ಮೂಲಭೂತ ಸೌಕರ್ಯಗಳ ಅಭಿವೃದ್ಧಿ
* ಬಡತನ ನಿರ್ಮೂಲನೆ ಯೋಜನೆಗಳು

**4. ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ತಿಳಿಸಿ?**

* ಗ್ರಾಮದ ಆಡಳಿತ ಅಧಿಕಾರ ಹಾಗೂ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೆ ವಹಿಸಿ ಕೊಡುವುದು.
* ನಿರ್ಧಾರ ಕೈಗೊಳ್ಳುವಲ್ಲಿ ಜನರ ಪಾಲುದಾರಿಕೆಯನ್ನು ಹೆಚ್ಚಿಸುವುದು
* ತಳಮಟ್ಟದಿಂದ ಯೋಜನೆ ನಿರೂಪಿಸುವಿಕೆ ಮತ್ತು ಅಭಿವೃದ್ಧಿ ಸಾಧನೆಯ ಪ್ರಕ್ರಿಯೆಯಾಗಿದೆ ಇದನ್ನು ಗಾಂಧೀಜಿಯವರು ಗ್ರಾಮಸ್ವರಾಜ್ ಎಂದು ಕರೆದರು
* ವಿಕೇಂದ್ರೀಕರಣವು ಶೋಷಣೆ ತಡೆಗಟ್ಟಿ ಮಾನವನ ಸ್ವಾತಂತ್ರ್ಯ ಮತ್ತು ಘನತೆಯನ್ನು ಸಂರಕ್ಷಿಸುತ್ತದೆ
* ಸಹಾನುಭೂತಿ ಮತ್ತು ಸಹಕಾರ ದಂತ ಮಾನವೀಯ ಮೌಲ್ಯಗಳನ್ನು ವೃದ್ಧಿಸುತ್ತದೆ

**5. ಪಂಚಾಯತ್ ರಾಜ್ ವ್ಯವಸ್ಥೆ ಪ್ರಮುಖ ಲಕ್ಷಣಗಳನ್ನು ಪಟ್ಟಿಮಾಡಿ?**

* ಮೂರು ಹಂತದ ಪಂಚಾಯಿತಿ ವ್ಯವಸ್ಥೆ
* ನೇರ ಹಾಗೂ ನಿಯಮಿತ ಚುನಾವಣೆಗಳು
* ವಿವಿಧ ವರ್ಗಗಳಿಗೆ ಮೀಸಲಾತಿ
* ಹಣಕಾಸು ಆಡಳಿತಾತ್ಮಕ ಮುಂಗಡಪತ್ರ ಮತ್ತು ಲೆಕ್ಕಪರಿಶೋಧನೆ ಜವಾಬ್ದಾರಿ
* ಕಾರ್ಯನಿರ್ವಾಹಕ ಮತ್ತು ಇತರ ಸಿಬ್ಬಂದಿ ನೀಡಿಕೆ
* ಪಂಚಾಯಿತಿಗಳು ವಿಸರ್ಜನೆ ಗೊಂಡ ಆರು ತಿಂಗಳ ಒಳಗೆ ಕಡ್ಡಾಯ ಚುನಾವಣೆ.

**6. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ಏನು?**

* ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು
* ಉದ್ಯೋಗವಕಾಶಗಳನ್ನು ಒದಗಿಸುವುದು
* ಕೃಷಿಗೆ ನೀರಾವರಿ ವಿಸ್ತರಣೆ
* ಗೃಹ ಕೈಗಾರಿಕೆ ಗಳನ್ನು ಪ್ರೋತ್ಸಾಹಿಸುವುದು
* ಬಡತನ ಮತ್ತು ನಿರುದ್ಯೋಗ ನಿವಾರಣೆ
* ಗ್ರಾಮೀಣ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವುದು
* ಅರ್ಹರಿಗೆ ಸರ್ಕಾರದ ಸೌಲಭ್ಯ ಒದಗಿಸುವುದು

**7. ಮಹಿಳೆಯರ ಸಂಘಟನೆ ಮತ್ತು ಆರ್ಥಿಕ ಸ್ವಾವಲಂಬನೆ ಸಾಧಿಸುವಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಪಾತ್ರವೇನು?**

* ಗ್ರಾಮೀಣ ಮಹಿಳೆಯರ ಸಬಲೀಕರಣ
* ಗ್ರಾಮೀಣ ಮಹಿಳೆಯರ ಆರ್ಥಿಕ ಸ್ವಾವಲಂಬನೆ
* ಉಳಿತಾಯಕ್ಕೆ ಪ್ರೋತ್ಸಾಹ ನೀಡುವುದು
* ಉತ್ಪಾದಕ ಚಟುವಟಿಕೆಗಳಿಗೆ ಸಾಲ ನೀಡುವುದು
* ಕುಡಿತ. ಜೂಜು ಮುಂತಾದ ದುಶ್ಚಟಗಳ ವಿರುದ್ಧ ಹೋರಾಟ
* ಬಾಲ್ಯ ವಿವಾಹ. ಜಾತಿಪದ್ಧತಿ ಮುಂತಾದ ಸಾಮಾಜಿಕ ಪಿಡುಗುಗಳ ನಿರ್ಮೂಲನೆಗೆ ಹೋರಾಟ

## ವ್ಯವಹಾರ ಅಧ್ಯಯನ

## 1. ಬ್ಯಾಂಕು ವ್ಯವಹಾರಗಳು

**1. ಬ್ಯಾಂಕಿನ ಗುಣಲಕ್ಷಣಗಳನ್ನು ಪಟ್ಟಿ ಮಾಡಿ.**

* ಸಾರ್ವಜನಿಕರ ಹಣದ ವಹಿವಾಟನ್ನು ಮಾಡುತ್ತವೆ.
* ಒಬ್ಬ ವ್ಯಕ್ತಿ/ಒಂದು ಸಂಸ್ಥೆ/ಕಂಪನಿ ಆಗಿರಬಹುದು.
* ಸಾರ್ವಜನಿಕರಿಂದ ಠೇವಣಿಗಳನ್ನು ಅಂಗೀಕರಿಸುತ್ತವೆ.
* ಬ್ಯಾಂಕುಗಳು ಸಾಲವನ್ನು ನೀಡುತ್ತವೆ.
* ಗ್ರಾಹಕರಿಗೆ ಉಪಯುಕ್ತ ಸೇವೆಗಳನ್ನು ಒದಗಿಸುತ್ತದೆ.
* ಠೇವಣಿದಾರ & ಸಾಲಗಾರರ ಮಧ್ಯೆ ಕೊಂಡಿಯಾಗಿದೆ.
* ಹೆಸರಿನೊಂದಿಗೆ ಬ್ಯಾಂಕ್ ಎಂಬ ಪದವಿರುತ್ತದೆ.
* ಚೆಕ್/ಹುಂಡಿಗಳ ಮೂಲಕ ಹಣವನ್ನು ಪಾವತಿಸುತ್ತವೆ.

**2. ಬ್ಯಾಂಕ್ ನಿರ್ವಹಿಸುವ ಕಾರ್ಯಗಳಾವುವು?**

* ಠೇವಣಿಗಳನ್ನು ಅಂಗೀಕರಿಸುವುದು. * ಸಾಲ ಕೊಡುವುದು.
* ಹಣವನ್ನು ವರ್ಗಾಯಿಸುವುದು. * ಹುಂಡಿಗಳನ್ನು ಸೋಡಿ ಮಾಡುವುದು.
* ಚೆಕ್ಕು & ಹುಂಡಿಗಳ ಮೇಲೆ ಹಣ ವಸೂಲಿ.
* ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು.
* ವಿದೇಶಿ ವಿನಿಮಯದ ವ್ಯವಹಾರಗಳ ನಿರ್ವಹಣೆ.

**3. ಬ್ಯಾಂಕ್ ಮತ್ತು ಗ್ರಾಹಕರ ಸಂಬಂಧವನ್ನು ವಿವರಿಸಿ.**

ಬ್ಯಾಂಕ್ & ಗ್ರಾಹಕರಿಗೂ ಇರುವ ಸಂಬಂಧಗಳನ್ನು ಎರಡು ರೀತಿಗಳಲ್ಲಿ ವಿಂಗಡಿಸಬಹುದಾಗಿದೆ.

**ಸಾಮಾನ್ಯ ಸಂಬಂಧ:**–ಇದರಲ್ಲಿ ಮೂರು ಪ್ರಕಾರಗಳಿವೆ
1.ಪ್ರಾಥಮಿಕ ಸಂಬಂಧ 2.ಸಹಾಯಕ ಸಂಬಂಧ
3.ಕಾರುಬಾರಿ ಅಥವಾ ನಿಯೋಗಿ ಮತ್ತು ಮುಖ್ಯಸ್ಥನ ಸಂಬಂಧ
**ವಿಶೇಷ ಸಂಬಂಧ:**– ಇದರಲ್ಲಿ ಎರಡು ಪ್ರಕಾರಗಳಿವೆ.
1.ಚೆಕ್ಕುಗಳನ್ನು ಮನ್ನಣೆ ಮಾಡುವುದು. 2.ಗ್ರಾಹಕರ ಲೆಕ್ಕಗಳ ಗೌಪ್ಯತೆ ಕಾಪಾಡುವುದು.

**4. ಅಂಚೆಕಛೇರಿಗಳು ಅನೇಕ ಹಣಕಾಸಿನ ವ್ಯವಹಾರಗಳನ್ನ ಸಹ ಕೈಗೊಳ್ಳುತ್ತಿವೆ. ಸಮರ್ಥಿಸಿ.**

* ರಾಷ್ಟ್ರೀಯ ಉಳಿತಾಯ ಪತ್ರ * ಅಂಚೆ ಉಳಿತಾಯ ಖಾತೆಗಳು
* ಕಿಸಾನ್ ವಿಕಾಸ ಪತ್ರ * ಆವರ್ತ ಠೇವಣಿಗಳು
* ಅಂಚೆ ವಿಮೆ * ನಿವೃತ್ತಿ ವೇತನ
* ಹಣದ ವರ್ಗಾವಣೆ

**5. ಬ್ಯಾಂಕ್ ಖಾತೆಯನ್ನು ತೆರೆಯುವ ವಿಧಾನವನ್ನು ವಿವರಿಸಿ.**

* ಬ್ಯಾಂಕ್ ಖಾತೆಯನ್ನು ನಿರ್ಧರಿಸುವುದು
* ಬ್ಯಾಂಕ್ ಅಧಿಕಾರಿಯನ್ನು ಸಂಪರ್ಕಿಸುವುದು
* ಪ್ರಸ್ತಾವನೆ ಅರ್ಜಿಯನ್ನು ತುಂಬುವುದು
* ಪರಿಚಿತರ ಉಲ್ಲೇಖನವನ್ನು ಕೊಡುವುದು
* ಅರ್ಜಿಯನ್ನು ಅಧಿಕಾರಿಗೆ ಒಪ್ಪಿಸುವುದು
* ಅಧಿಕಾರಿಯ ಒಪ್ಪಿಗೆ
* ಆರಂಭಿಕ ಠೇವಣಿ

**6. ಬ್ಯಾಂಕ್ ಖಾತೆ ತೆರೆಯುವುದರಿಂದ ಆಗುವ ಅನುಕೂಲಗಳಾವುವು?**

* ಹಣದ ಭದ್ರತೆ ಕಾಪಾಡುತ್ತದೆ.
* ಹಣದ ಪಾವತಿಗಳನ್ನುಮಾಡಲು ಸಹಾಯಕವಾಗಿದೆ.
* ಹಣವನ್ನು ವಸೂಲಿ ಮಾಡಲು ಸಹಾಯ ಮಾಡುತ್ತದೆ.
* ಸಾಲ ಪಡೆಯಲು ಸಾಧ್ಯವಾಗುತ್ತದೆ.
* ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯ.
* ಭದ್ರತಾ ಕಪಾಟುಗಳನ್ನು ಪಡೆಯಬಹುದು.

**7. ಉಳಿತಾಯ ಖಾತೆ ಹಾಗೂ ಚಾಲ್ತಿ ಖಾತೆಗಳಿಗಿರು ವ್ಯತ್ಯಾಸಗಳೇನು?**

**ಉಳಿತಾಯ ಖಾತೆ**

* ವೇತನ ಪಡೆಯುವವರು/ನಿಯಮಿತ ಆದಾಯ ಹೊಂದಿರುವ ಜನರು ಈ ಖಾತೆಯನ್ನು ತೆರೆಯುತ್ತಾರೆ.
* ಚೆಕ್ಕು ಮಸ್ತಕ/ಹಣ ಹಿಂದಕ್ಕೆ ಪಡೆಯುವ ಚೀಟಿಯ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯವಿದೆ.
* ಈ ಠೇವಣಿಗಳಿಗೆ ಬಡ್ಡಿಯನ್ನು ನೀಡಲಾಗುತ್ತದೆ

**ಚಾಲ್ತಿ ಖಾತೆ**

* ವ್ಯಾಪಾರಸ್ಥರು, ವಾಣಿಜ್ಯ & ಔದ್ಯೋಗಿಕ ಸಂಸ್ಥೆಗಳು ಈ ಖಾತೆಯನ್ನು ತೆರೆಯುತ್ತಾರೆ.
* ಮರು ಪಾವತಿ, ಬೇಡಿಕೆ ಠೇವಣಿಗಳು ಮತ್ತು ಉಪಸರ್ಗ ವ್ಯವಹಾರಗಳ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯವಿದೆ.
* ಈ ಠೇವಣಿಗಳಿಗೆ ಬಡ್ಡಿಯನ್ನು ನೀಡುವುದಿಲ್ಲ.

**8. ಬ್ಯಾಂಕ್ ಒದಗಿಸುವ ವಿವಿಧ ಸೇವೆಗಳನ್ನು ಪಟ್ಟಿ ಮಾಡಿ.**

* ಜಮಾ ಕಾರ್ಡುಗಳನ್ನು ಕೊಡುವುದು.
* ಮನೆಕಟ್ಟಲು, ವಾಹನ ಖರೀದಿಗೆ ಸಾಲ ನೀಡುವುದು.
* ಪರಸ್ಪರ ನಿಧಿಗಳನ್ನು ನಿರ್ವಹಿಸುವುದು.
* ಭದ್ರತಾ/ರಕ್ಷಣಾ ಕಪಾಟುಗಳನ್ನು ಕೊಡುವುದು. * ಭರವಸೆಯ ಸೇವೆಗಳು
* ಸಹಿಗಳಿಗೆ ಜವಾಬ್ದಾರಿ ಹಾಕುವುದು.

**9. ಬ್ಯಾಂಕುಗಳ ವಿವಿಧ ಪ್ರಕಾರಗಳನ್ನು ಹೆಸರಿಸಿ.**

* ಕೇಂದ್ರ ಬ್ಯಾಂಕು ಅಥವಾ ರಿಜರ್ವ್ ಬ್ಯಾಂಕು * ವಾಣಿಜ್ಯ ಬ್ಯಾಂಕುಗಳು
* ಕೈಗಾರಿಕಾ ಅಭಿವೃದ್ಧಿ ಬ್ಯಾಂಕುಗಳು * ಸ್ಥಳೀಯ ಬ್ಯಾಂಕುಗಳು
* ಭೂ ಅಭಿವೃದ್ಧಿ ಅಥವಾ ವ್ಯವಸಾಯ ಬ್ಯಾಂಕುಗಳು
* ಸಹಕಾರಿ ಬ್ಯಾಂಕುಗಳು

# ಭಾರತದ ನಕಾಶೆ










ಉಪನಿರ್ದೇಶಕರ ಕಛೇರಿ ದಾವಣಗೆರೆ

# ಮಾದರಿ ಪ್ರಶ್ನೆಪತ್ರಿಕೆ-1 2021-22

ವಿಷಯ: ಸಮಾಜ ವಿಜ್ಞಾನ 10ನೇ ತರಗತಿ

ಸಮಯ: 3 ಗಂಟೆಗಳು ಅಂಕಗಳು: 80

---

**I.** ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರ ಬರೆಯಲು ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರಗಳೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

**8x1=8**

1. ಬ್ರಿಟಿಷರಿಗೆ ಬಂಗಾಳದಲ್ಲಿ ಮುಕ್ತ ವ್ಯಾಪಾರವನ್ನು ಮಾಡಲು ದಸ್ತಕ(ಪರವಾನಗಿ)ಗಳನ್ನು ನೀಡಿದ ಮೊಘಲ್ ದೊರೆ

   ಎ) ಜಹಾಂಗೀರ್ ಬಿ) ಫಾರೂಕ್ ಶಿಯಾರ್ ಸಿ) 2ನೇ ಷಾ ಆಲಂ ಡಿ) ಮೀರ್ ಖಾಸಿಂ

2. ಭಾರತದಲ್ಲಿ ರಚನೆಯಾದ ಮೊದಲ ಭಾಷಾವಾರು ರಾಜ್ಯ

   ಎ) ಆಂಧ್ರ ಪ್ರದೇಶ ಬಿ) ತಮಿಳುನಾಡು ಸಿ) ಕರ್ನಾಟಕ ಡಿ) ಮಹಾರಾಷ್ಟ್ರ

3. ಇತ್ತೀಚಿಗೆ ಸರ್ಕಾರಿ ಕಛೇರಿಗಳಲ್ಲಿ ಸಿಸಿ ಕ್ಯಾಮೆರಗಳನ್ನು ಅಳವಡಿಸುತ್ತಿರುವುದಕ್ಕೆ ಕಾರಣ

   ಎ) ಭ್ರಷ್ಟಾಚಾರ ಬಿ) ನಿರುದ್ಯೋಗ ಸಿ) ಬಡತನ ಡಿ) ಕೋಮುವಾದ

4. ಸಾಮಾಜಿಕ ಅಸಮಾನತೆ ಎನ್ನುವುದು ಈಗಾಗಲೇ ಸಮಾಜದಲ್ಲಿರುವ ಇದರ ಪ್ರತಿಫಲವಾಗಿದೆ.

   ಎ)ಅಸಮಾನ ಸಾಮಾಜಿಕ ಅವಕಾಶ ಬಿ)ಸಾಮಾಜಿಕ ಸ್ತರವಿನ್ಯಾಸ ಸಿ)ಸಮಾನ ಸಾಮಾಜಿಕ ಅವಕಾಶ ಡಿ)ಲಿಂಗತ್ವ ಅಸಮಾನತೆ

5. ಚಿತ್ರ ಕಲಾಕಾರನೊಬ್ಬನು ತನ್ನ ಆತ್ಮ ಸಂತೋಷಕ್ಕಾಗಿ ಚಿತ್ರವೊಂದನ್ನು ಬಿಡಿಸುವ ಕಾರ್ಯದಲ್ಲಿ ತೊಡಗಿರುವುದು

   ಎ) ಸಂಭಾವನೆ ಸಹಿತ ದುಡಿಮೆ ಬಿ) ಶ್ರಮ ವಿಭಜನೆ ಸಿ) ಸಂಭಾವನೆ ರಹಿತ ದುಡಿಮೆ ಡಿ) ವಿಶೇಷ ಪರಿಣಿತಿ

6. ಸಾಮಾನ್ಯವಾಗಿ ಭಾರತದಲ್ಲಿ ಪರಿಸರಣ ಮಳೆಯು ಈ ಅವಧಿಯಲ್ಲಿ ಬೀಳುತ್ತದೆ.

   ಎ) ಚಳಿಗಾಲ ಬಿ) ಬೇಸಿಗೆ ಕಾಲ ಸಿ) ಮಳೆಗಾಲ ಡಿ) ನಿರ್ಗಮನ ಮಾನ್‌ಸೂನ್ ಮಾರುತಗಳ ಕಾಲ

7. ಆರ್ಥಿಕ ಅಭಿವೃದ್ಧಿಯೆಂದರೆ ಜನರ ಆರ್ಥಿಕ ಕಲ್ಯಾಣದ ಹೆಚ್ಚಳವೆಂದು ಹೇಳಿದವರು

   ಎ) ಪ್ರೊ.ಕೋಲಿನ್ ಕ್ಲಾರ್ಕ್ ಬಿ) ಪ್ರೊ.ಮೆಯರ್ ಮತ್ತು ಬಾಲ್ಡವಿನ್ ಸಿ) ಅಮರ್ತ್ಯ ಸೇನ್ ಡಿ)ಮಹಬೂಬ್ ಉಲ್ ಹಕ್

8. ಕಿಸಾನ್ ವಿಕಾಸ ಪತ್ರಗಳನ್ನು ನೀಡುವ ಸಂಸ್ಥೆ

   ಎ) ಭೂ ಅಭಿವೃದ್ಧಿ ಬ್ಯಾಂಕ್ ಬಿ) ಸಹಕಾರಿ ಬ್ಯಾಂಕ್ ಸಿ) ರಿಜರ್ವ್ ಬ್ಯಾಂಕ್ ಡಿ) ಅಂಚೆ ಕಛೇರಿ

**II.** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ: **8x1=8**

9. ಗೋವಾ ಪೋರ್ಚುಗೀಸರ ಆಡಳಿತ ಕೇಂದ್ರವಾದುದು ಹೇಗೆ?
10. ಸಹಾಯಕ ಸೈನ್ಯ ಪದ್ಧತಿ ಎಂದರೇನು?
11. ಭಾರತವು ಯಾವ ರೀತಿಯ ನಿಶ್ಶಸ್ತ್ರೀಕರಣವನ್ನು ಪ್ರತಿಪಾದಿಸಿದೆ?
12. ಸಂಭಾವನೆ ರಹಿತ ದುಡಿಮೆ ಎಂದರೇನು?
13. ಈಶಾನ್ಯ ರಾಜ್ಯಗಳು ಅಧಿಕ ಮಳೆಯನ್ನು ಪಡೆಯುತ್ತವೆ. ಹೇಗೆ?
14. ಕಪ್ಪು ಮಣ್ಣು ದೀರ್ಘ ಕಾಲ ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ. ಏಕೆ?
15. ನಿರೀಕ್ಷಿತ ಜೀವಿತಾವಧಿಯನ್ನು ಅರ್ಥೈಸಿರಿ.
16. ಟೆಲಿಶಾಪಿಂಗ್ ಎಂದರೇನು?

**III.** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ: **8x2=16**

17. ಬಕ್ಸಾರ್ ಕದನದ ಪರಿಣಾಮಗಳಾವುವು?
18. 1ನೇ ಆಂಗ್ಲೋ ಮರಾಠ ಯುದ್ಧಕ್ಕೆ ಕಾರಣಗಳೇನು?
19. ಭಾರತ ವಿದೇಶಾಂಗ ನೀತಿಯ ಉದ್ದೇಶಗಳು ಯಾವುವು? ಅಥವಾ
    ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳಾವುವು?
20. ಸಾಮಾಜಿಕ ಸ್ತರವಿನ್ಯಾಸ ಸರ್ವವ್ಯಾಪಕವಾದುದೆಂದು ಹೇಗೆ ಹೇಳುವಿರಿ. ಅಥವಾ
    ದುಡಿಮೆಯ ತಾರತಮ್ಯತೆಯನ್ನು ವಿವರಿಸಿ.
21. ಡೂನ್ ಎಂದರೇನು? ಉದಾಹರಣೆ ಕೊಡಿ.
22. ಅರಣ್ಯ ಸಂರಕ್ಷಣೆಗೆ ನೀವು ಸೂಚಿಸುವ ಕ್ರಮಗಳೇನು?
23. ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ?
24. ಭಾರತದಲ್ಲಿರುವ ಉದ್ಯಮಿಗಳ ಪ್ರವರ್ತಕ ಸಂಸ್ಥೆಗಳನ್ನು ಹೆಸರಿಸಿ.

**IV.** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ: **9x3=27**

25. ಬ್ರಿಟಿಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳ ಪಟ್ಟಿ ಮಾಡಿ. ಅಥವಾ
    ಕಿತ್ತೂರಿನ ರಾಣಿ ಚೆನ್ನಮ್ಮಳಿಗೆ ಬ್ರಿಟಿಷರ ವಿರುದ್ಧ ಯುದ್ಧ ಅನಿವಾರ್ಯವಾಗಿತ್ತು. ಏಕೆ?
26. ಬ್ರಹ್ಮಸಮಾಜದ ಬೋಧನೆಗಳನ್ನು ವಿವರಿಸಿ.
27. 1857ರ ದಂಗೆಯು ಬ್ರಿಟಿಷರನ್ನು ಭಾರತದಿಂದ ಹೊರ ಹಾಕುವಲ್ಲಿ ವಿಫಲವಾಯಿತು ಏಕೆ?
28. ರಷ್ಯಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.
29. ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳೇನು?
30. ಭೂಕುಸಿತಕ್ಕೆ ಕಾರಣಗಳನ್ನು ಪಟ್ಟಿ ಮಾಡಿರಿ.
31. ಸಾರಿಗೆಯ ಪ್ರಾಮುಖ್ಯತೆಯನ್ನು ವಿವರಿಸಿ. ಅಥವಾ
    ಕೈಗಾರಿಕಾ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?
32. ಲಿಂಗ ಸಮಾನತೆಯನ್ನು ಹೇಗೆ ಸಾಧಿಸುವುದು? ಅಥವಾ
    ಗ್ರಾಮೀಣ ಅಭಿವೃದ್ಧಿಯ ಮಹತ್ವವನ್ನು ಕುರಿತು ವಿಶ್ಲೇಷಿಸಿ.
33. ಬ್ಯಾಂಕ್ ಖಾತೆಯನ್ನು ತೆರೆಯುವ ವಿಧಾನವನ್ನು ವಿವರಿಸಿ. ಅಥವಾ
    ಯಾರೇ ಒಬ್ಬ ಮನುಷ್ಯನಾಗಲಿ ಸ್ವ ಉದ್ಯೋಗ ಉದ್ದಿಮೆಯನ್ನು ಸ್ಥಾಪಿಸಲು ಇಷ್ಟಪಟ್ಟಲ್ಲಿ ಸಲಹೆ ಸೌಕರ್ಯಗಳಿಗೆ ಆರಿಸಿಕೊಳ್ಳಬೇಕಾದ ಸಂಸ್ಥೆಗಳು ಯಾವುವು?

**V.** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ: **4x4=16**

34. ಸ್ವಾತಂತ್ರ ಚಳುವಳಿಯಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ. ಅಥವಾ
    ಅಸಹಕಾರ ಚಳುವಳಿಯನ್ನು ವಿವರಿಸಿ.
35. ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯವರ ಪಾತ್ರವನ್ನು ವಿವರಿಸಿರಿ.
36. ಭಾರತದಲ್ಲಿನ ನಿರುದ್ಯೋಗದ ಬಗ್ಗೆ ಬರೆಯಿರಿ.
37. ಮುಂಗಾರು ಬೆಳೆ ಮತ್ತು ಹಿಂಗಾರ ಋತುಗಳ ನಡುವಣ ವ್ಯತ್ಯಾಸ ತಿಳಿಸಿ.

**VI.** 38. ಭಾರತದ ನಕ್ಷೆಯನ್ನು ಬರೆದು ಇವುಗಳನ್ನು ಗುರುತಿಸಿ: **1+4=5**

ಎ) $82\frac{1}{2}$ ಡಿಗ್ರಿ ಪೂರ್ವ ರೇಖಾಂಶ

ಬಿ) ನರ್ಮದಾ ನದಿ

ಸಿ) ಮುಂಬೈ ಹೈ

ಡಿ) ಹಿರಾಕುಡ್ ಯೋಜನೆ

# ಮಾದರಿ ಪ್ರಶ್ನೆಪತ್ರಿಕೆ–2. 2021-22

ವಿಷಯ: ಸಮಾಜ ವಿಜ್ಞಾನ | 10ನೇ ತರಗತಿ

ಸಮಯ: 3 ಗಂಟೆಗಳು | ಅಂಕಗಳು: 80

**I.** ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರ ಬರೆಯಲು ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರಗಳೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ. **8x1=8**

1. ನಾಗರೀಕ ಸೇವಾ ವ್ಯವಸ್ಥೆಯನ್ನು ಜಾರಿಗೆ ತಂದನು

ಎ) ವಾರನ್ ಹೇಸ್ಟಿಂಗ್ ಬಿ) ಲಾರ್ಡ್ ಕಾರ್ನ್‌ವಾಲೀಸ ಸಿ) ಲಾರ್ಡ್ ಡಾಲ್ ಹೌಸಿ ಡಿ) ವಿಲಿಯಂ ಬೆಂಟಿಂಕ್

2. ಭಾರತ ಸರ್ಕಾರವು ಸೈನಿಕ ಕಾರ್ಯಾಚರಣೆಯ ಮೂಲಕ ವಶ ಪಡಿಸಿಕೊಂಡ ಸಂಸ್ಥಾನ

ಎ) ಜಮ್ಮು–ಕಾಶ್ಮೀರ ಬಿ) ಜುನಾಗಢ ಸಿ) ಹೈದರಾಬಾದ್ ಡಿ) ಮೈಸೂರು

3. ಈ ಕೆಳಗಿನ ಯಾವ ಸಮಸ್ಯೆಯು ಭಾರತದಲ್ಲಿ ಸಾರ್ವತ್ರಿಕವಾಗಿ ಹಾಗೂ ಸಮಾಜದ ಎಲ್ಲಾ ಸ್ತರಗಳಲ್ಲಿಯೂ ವ್ಯಾಪಕವಾಗಿ ಹಬ್ಬಿದೆ.

ಎ) ಭ್ರಷ್ಟಾಚಾರ ಬಿ) ನಿರುದ್ಯೋಗ ಸಿ) ಬಡತನ ಡಿ) ಭಯೋತ್ಪಾದನೆ

4. ಸಂವಿಧಾನ ––––– ತಿದ್ದುಪಡಿಯ ಮೂಲಕ ಶಿಕ್ಷಣ ಮೂಲಭೂತ ಹಕ್ಕೆಂಬ ಅಂಶವನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ.

ಎ) 45ನೇ ಬಿ) 46ನೇ ಸಿ) 73ನೇ ಡಿ) 86ನೇ

5. ಈ ಕೆಳಗಿನವುಗಳಲ್ಲಿ ಯಾವುದು ಸಂಭಾವನೆ ರಹಿತ ದುಡಿಮೆಯಾಗಿದೆ.

ಎ) ದಾದಿಯರ ಕೋರ್ಸ್ ಬಿ) ಕೈಗಾರಿಕೆಗಳ ದುಡಿಮೆ ಸಿ) ಬೀದಿ ಬದಿಯ ವ್ಯಾಪಾರ ಡಿ) ವಾಹನಗಳ ರಿಪೇರಿ

6. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಬೀಳುವ ಮಳೆಯನ್ನು ಬಂಗಾಳದಲ್ಲಿ ಹೀಗೆನ್ನುತ್ತಾರೆ

ಎ) ಕಾಲಬೈಸಾಕಿ ಬಿ) ಮಾವಿನ ಹೊಯ್ಲು ಸಿ) ಕಾಫಿಯ ಹೂಮಳೆ ಡಿ) ಆಂಧಿಸ್

7. ಜಾಗತಿಕ ಮಾನವ ಅಭಿವೃದ್ಧಿ ವರದಿಗಳ ಪ್ರಕಟಣೆಯ ಹೊಣೆ ಹೊತ್ತಿರುವ ಸಂಸ್ಥೆ

ಎ) ಯುನೆಸ್ಕೋ ಬಿ) ಯುನಿಸೆಫ್ ಸಿ) ವಿಶ್ವಬ್ಯಾಂಕ್ ಡಿ) ಯು.ಎನ್.ಡಿ.ಪಿ

8. ಬ್ಯಾಂಕುಗಳ ಬ್ಯಾಂಕ್ ಎಂದು ಕರೆಯಲ್ಪಡುವ ಬ್ಯಾಂಕ್

ಎ) ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ಬಿ) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

ಸಿ) ಭಾರತೀಯ ರಿಜರ್ವ್ ಬ್ಯಾಂಕ್ ಡಿ) ಸಹಕಾರಿ ಬ್ಯಾಂಕ್

**II.** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ: **8x1=8**

9. ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು ಯಾರು?
10. ಎರಡನೇ ಆಂಗ್ಲೋ ಮರಾಠ ಯುದ್ಧಕ್ಕೆ ಕಾರಣವೇನು?
11. ತೃತೀಯ ಜಗತ್ತನ್ನು ವ್ಯಾಖ್ಯಾನಿಸಿ.
12. ದುಡಿಮೆ ಎಂದರೇನು?
13. ಮಾವಿನ ಹೊಯ್ಲು ಎಂದರೇನು?
14. ಮೆಕ್ಕಲು ಮಣ್ಣು ಹೇಗೆ ಉತ್ಪತ್ತಿಯಾಗುತ್ತದೆ?
15. ತಲಾದಾಯವನ್ನು ಹೇಗೆ ಪಡೆಯಬಹುದು?
16. ಭಾರತದಲ್ಲಿ ಗ್ರಾಹಕ ಸಂರಕ್ಷಣಾ ಕಾಯ್ದೆ ಯಾವಾಗ ಜಾರಿಗೆ ಬಂತು?

**III.** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ: **8x2=16**

17. ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯಲು ಕಾರಣವಾದ ಅಂಶಗಳನ್ನು ಚರ್ಚಿಸಿರಿ.
18. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳಾವುವು?
19. ಪಂಚಶೀಲ ತತ್ವಗಳಾವುವು?

ಅಥವಾ

ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಗ್ನತೆಗೆ ಕಾರಣವಾದ ವಿಷಯಗಳು ಯಾವುವು?

20. ಸಾಮಾಜಿಕ ಅಸಮಾನತೆಗೆ ಕಾರಣಗಳಾವುವು?

ಅಥವಾ

ದೊಂಬಿಯ ಸ್ವರೂಪವನ್ನು ತಿಳಿಸಿ.

21. ಪೂರ್ವಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ವ್ಯತ್ಯಾಸಗಳನ್ನು ತಿಳಿಸಿ.
22. ಮ್ಯಾಂಗ್ರೋವ್ ಕಾಡುಗಳ ಲಕ್ಷಣಗಳೇನು?
23. ಮಹಿಳಾ ಸಂಘಟನೆ ಮತ್ತು ಆರ್ಥಿಕ ಸ್ವಾವಲಂಬನೆ ಸಾಧನೆಯಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಪಾತ್ರವೇನು?
24. ಉದ್ಯಮಗಾರಿಕೆಯು ಸೃಜನಾತ್ಮಕ ಚಟುವಟಿಕೆಯಾಗಿದೆ. ಏಕೆ?

**IV.** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ: **9x3=27**

25. ಬ್ರಿಟಿಷರ ಕಾಲದಲ್ಲಿ ಪೋಲೀಸ್ ವ್ಯವಸ್ಥೆಯಲ್ಲಿ ತಂದಂತಹ ಸುಧಾರಣೆಗಳಾವುವು?

ಅಥವಾ

ಸಂಗೊಳ್ಳಿ ರಾಯಣ್ಣನು ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿವರಿಸಿ.

26. ಸ್ವಾಮಿ ವಿವೇಕಾನಂದರ ಚಿಂತನೆಗಳನ್ನು ವಿವರಿಸಿ.
27. 1857ರ ದಂಗೆಗೆ ಆರ್ಥಿಕ ಬದಲಾವಣೆಗಳು ಹೇಗೆ ಕಾರಣವಾದವು? ವಿವರಿಸಿ.
28. ಭಾರತ ಮತ್ತು ಚೀನಾ ನಡುವಿನ ಸಂಬಂದವನ್ನು ವಿವರಿಸಿ.
29. ಅಸಂಘಟಿತ ದುಡಿಮೆಗಾರ ಸಮಸ್ಯೆಗಳನ್ನು ಪಟ್ಟಿ ಮಾಡಿರಿ.
30. ಭಾರತದಲ್ಲಿರುವ ಪ್ರಮುಖ ಬಂದರುಗಳನ್ನು ಪಟ್ಟಿ ಮಾಡಿ.
31. ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಕೈಗಾರಿಕೆಗಳ ಮಹತ್ವವನ್ನು ವಿವರಿಸಿ.

ಅಥವಾ

ಭೂಕಂಪದ ಪರಿಣಾಮಗಳನ್ನು ಮಿತಗೊಳಿಸಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಿ.

32. ಅನಾಭಿವೃದ್ಧಿ ಎಂದರೇನು? ಅದಕ್ಕೆ ಕಾರಣಗಳೇನು?

ಅಥವಾ

ಗಾಂಧೀಜಿಯವರ ಗ್ರಾಮಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ತಿಳಿಸಿ.

33. ಬ್ಯಾಂಕ್ ನಿರ್ವಹಿಸುವ ಕಾರ್ಯಗಳಾವುವು?

ಅಥವಾ

ಉದ್ಯಮಗಾರಿಕೆಯ ಗುಣಲಕ್ಷಣಗಳನ್ನು ವಿವರಿಸಿ

**V.** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ: **4x4=16**

34. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳ ಪಾತ್ರವನ್ನು ವಿವರಿಸಿ.

ಅಥವಾ

ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಸಾಧನೆಯನ್ನು ವಿವರಿಸಿ.

35. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರೈತ ಮತ್ತು ಕಾರ್ಮಿಕರ ಪ್ರತಿಭಟನೆಯನ್ನು ವಿವರಿಸಿ.
36. ಮಹಿಳೆಯರ ಸ್ಥಾನಮಾನ ಉತ್ತಮ ಪಡಿಸಲು ಕೈಗೊಳ್ಳಬಹುದಾದ ಕ್ರಮಗಳಾವುವು?
37. ವ್ಯವಸಾಯದ ಪ್ರಾಮುಖ್ಯತೆಯನ್ನು ವಿವರಿಸಿ.

**VI.** 38. ಭಾರತದ ನಕ್ಷೆಯನ್ನು ಬರೆದು ಇವುಗಳನ್ನು ಗುರುತಿಸಿ: **1+4=5**

ಎ) ಇಂದಿರಾ ಕೋಲ್ ಬಿ) ಭಾಕ್ರಾನಂಗಲ್ ಯೋಜನೆ

ಸಿ) ಮುಂಬಯಿ ಡಿ) ಭದ್ರಾವತಿ

# ಮಾದರಿ ಪ್ರಶ್ನೆಪತ್ರಿಕೆ–3 2021–22

**ವಿಷಯ: ಸಮಾಜ ವಿಜ್ಞಾನ** **10ನೇ ತರಗತಿ**

**ಸಮಯ: 3 ಗಂಟೆಗಳು** **ಅಂಕಗಳು : 80**

---

**I . ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರ ಬರೆಯಲು ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರಗಳೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.** **8x1=8**

1. "ದತ್ತು ಮಕ್ಕಳಿಗೆ ಹಕ್ಕಿಲ್ಲ" ನೀತಿಯನ್ನು ಜಾರಿಗೆ ತಂದ ಗವರ್ನರ್ ಜನರಲ್.

   ಎ. ಲಾರ್ಡ್ ವೆಲ್ಲೆಸ್ಲಿ ಬಿ. ಲಾರ್ಡ್ ಕಾರನ್ ವಾಲಿಸ್ ಸಿ. ಲಾರ್ಡ್ ಡಾಲ್ ಹೌಸಿ ಡಿ. ಲಾರ್ಡ್ ವಿಲಿಯಂ ಬೆಂಟಿಂಕ್

2. **1938 ರ ಹರಿಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿದ್ದವರು.**

   ಎ. ಸರ್ದಾರ್ ವಲ್ಲಭಬಾಯಿ ಪಟೇಲ್ ಬಿ. ಡಾ. ಬಿ ಆರ್ ಅಂಬೇಡಗಕರ್

   ಸಿ. ಬಾಲಗಂಗಾಧರ್ ತಿಲಕ ಡಿ. ಸುಭಾಷ್ ಚಂದ್ರಬೋಸ್

3. **ಪಂಚಶೀಲ ತತ್ವಗಳಿಗ ಚೀನಾದ ಪ್ರಧಾನಿ ಚೌ ಎನ್ ಲಾಯ್ ಜೊತೆ ಒಪ್ಪಂದಕ್ಕೆ ಸಹಿ ಹಾಕಿದ ಭಾರತದ ಪ್ರಧಾನ.**

   ಎ.ಜವಾಹರಲಾಲ್ ನೆಹರು ಬಿ. ಲಾಲ್ ಬಹದ್ದೂರ್ ಶಾಸ್ತ್ರಿ

   ಸಿ. ಇಂದಿರಾ ಗಾಂಧಿ ಡಿ. ಅಟಲ್ ಬಿಹಾರಿ ವಾಜಪೇಯಿ

4. **ಅಸ್ಪೃಶ್ಯತೆಯ ಆಚರಣೆಯು ಕ್ರಮೇಣವಾಗಿ ಕಡಿಮೆಯಾಗುತ್ತಿದೆ. ಏಕೆಂದರೆ,**

   ಎ. ಹೆಚ್ಚುತ್ತಿರುವ ಉಉದ್ಯೋಗವಕಾಶಗಳು ಬಿ. ಹೆಚ್ಚುತ್ತಿರುವ ಸಾಕ್ಷರತೆ

   ಸಿ. ಉತ್ತಮ ಆರೋಗ್ಯ ಸೌಲಭ್ಯಗಳು ಡಿ. ಉತ್ತಮ ಸಾರಿಗೆ ವ್ಯವಸ್ಥೆ

5. **ನರ್ಮದಾ ಬಚಾವೋ ಆಂದೋಲನದ ನೇತೃತ್ವ ವಹಿಸಿದ್ದವರು.**

   ಎ. ಮೇಧಾ ಪಾಟ್ಕರ್ ಬಿ. ಡಾ. ಶಿವರಾಮ ಕಾರಂತ ಸಿ. ಕುಸುಮಾ ಸೊರಬ ಡಿ. ಸುಂದರ್ ಲಾಲ್ ಬಹುಗುಣ

6. **ಭಾರತದ ಅತ್ಯಂತ ಶೀತವಾದ ತಿಂಗಳು.**

   ಎ. ನವೆಂಬರ್ ಬಿ. ಡಿಸೆಂಬರ್ ಸಿ. ಜನವರಿ ಡಿ. ಫೆಬ್ರವರಿ

7. **ಗ್ರಾಮ ಸ್ವರಾಜ್ಯ ಪರಿಕಲ್ಪನೆ ನೀಡಿದವರು.**

   ಎ. ಜವಾಹರ್ ಲಾಲ್ ನೆಹರು ಬಿ. ಬಾಲಗಂಗಾಧರ್ ತಿಲಕ

   ಸಿ. ಸರ್ದಾರ್ ವಲ್ಲಭಭಾಯಿ ಪಟೇಲ್ ಡಿ. ಮಹಾತ್ಮಾ ಗಾಂಧೀಜಿ

8. **'ಬಿಳಿಕ್ರಾಂತಿಯ ಪಿತಾಮಹ 'ಎಂದು ಪ್ರಖ್ಯಾತರಾದ ಉದ್ಯಮಿ.**

   ಎ. ಡಾ. ಪ್ರತಾಪ್ ರೆಡಿ ಬಿ. ನರೇಶ್ ಗೋಯಲ್ ಸಿ. ವರ್ಗೀಸ್ ಕುರಿಯನ್ ಡಿ. ಕಿರಣ್ ಮುಜಮ್ ದಾರ್ ಷಾ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **8×1=8**

9. ಬಂಗಾಳದಲ್ಲಿ ದ್ವಿ ಪ್ರಭುತ್ವವನ್ನು ಜಾರಿಗೆ ತಂದವರು ಯಾರು?
10. ಶುದ್ಧಿ ಚಳುವಳಿಯನ್ನು ಏಕೆ ಆಚರಿಸಲಾಯಿತು?
11. ಮಾನವ ಹಕ್ಕುಗಳ ದಿನವನ್ನು ಯಾವಾಗ ಆಚರಿಸಲಾಗುವುದು?
12. ನಿತ್ಯಹರಿದ್ವರ್ಣ ಕಾಡುಗಳು ಸದಾ ಹಸಿರಾಗಿರಲು ಕಾರಣವೇನು?
13. ಮಿಶ್ರಬೇಸಾಯ ಎಂದರೇನು?
14. ಒಂದು ದೇಶದ ಅಭಿವೃದ್ಧಿಯನ್ನು ರಾಷ್ಟ್ರೀಯ ಆದಾಯದಿಂದ ಅಳೆಯುವುದು ಸಮಂಜಸವಲ್ಲ. ಏಕೆ?
15. ವಿಶ್ವ ಗ್ರಾಹಕ ಆಂದೋಲನದ ಚರಿತ್ರೆಯಲ್ಲಿ ಮಾರ್ಚ್ 15 1962 ಏಕೆ ಒಂದು ಮಹತ್ವದ ದಿನವಾಗಿದೆ?
16. ಕೈಗಾ ಅಣುಸ್ಥಾವರ ವಿರೋಧಿ ಚಳುವಳಿಯನ್ನು ಏಕೆ ನಡೆಸಲಾಯಿತು?.

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** 8×2=16

17. ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡು ಹಿಡಿಯಲು ಯುರೋಪಿಯನ್ನರನ್ನು ಪ್ರೇರೇಪಿಸಿದ ಅಂಶಗಳಾವುವು?
18. ಭಾರತದ ಸ್ವಾತಂತ್ರ್ಯ ನಂತರ ದೇಶವು ಎದುರಿಸಿದ ಸಮಸ್ಯಗಳನ್ನು ಪಟ್ಟಿ ಮಾಡಿ.
19. ಭಾರತದ ವಿದೇಶಾಂಗ ನೀತಿಯ ಉದ್ದೇಶಗಳೇನು?
**20.** " ಸಾಮಾಜಿಕ ಸ್ತರವಿನ್ಯಾಸವು ವಿವಿಧ ರೂಪಗಳಲ್ಲಿದೆ". ಹೇಗೆ? **ಅಥವಾ**
ಜನಮಂದೆ ಎಂದರೇನು? ಉದಾ ಸಹಿತ ವಿವರಿಸಿ.
21. ಕೊಟ್ಟಿರುವ ದಕ್ಷಿಣ ಭಾರತದ ನಕ್ಷೆಯಲ್ಲಿ ಗುರುತಿಸಿರುವ ಸ್ವಾಭಾವಿಕ ವಿಭಾಗವನ್ನು ಹೆಸರಿಸಿ ಮತ್ತು ಅದರ ಯಾವುದಾದರೂ ಎರಡು ಆರ್ಥಿಕ ಪ್ರಾಮುಖ್ಯತೆಯನ್ನು ತಿಳಿಸಿ.



22. ಮಣ್ಣಿನ ಸವೆತಕ್ಕೆ ಕಾರಣಗಳೇನು? **ಅಥವಾ**
ಅರಣ್ಯ ಸಂರಕ್ಷಿಸಲು ಕೈಗೊಂಡ ಕ್ರಮಗಳು ಯಾವುವು?
23. ಮಹಿಳಾ ಸ್ವ ಸಹಾಯ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ . ಸಮರ್ಥಿಸಿ.
24. ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆಗಳನ್ನು ಹೆಸರಿಸಿ.

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ:** 9×3=27

25. ಸಹಾಯಕ ಸೈನ್ಯ ಪದ್ಧತಿಯು ಭಾರತೀಯ ಸಂಸ್ಥಾನಗಳನ್ನು ಹೇಗೆ ನಿಯಂತ್ರಿಸಿತ್ತು?
26. ಬ್ರಿಟಿಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳ ಪಟ್ಟಿ ಮಾಡಿರಿ.
27. ಹಲಗಲಿಯ ಬೇಡರ ದಂಗೆಯನ್ನು ವಿವರಿಸಿ. **ಅಥವಾ**
ಆರ್ಯ ಸಮಾಜದ ಉದ್ದೇಶಗಳನ್ನು ವಿವರಿಸಿ.
28. ಭಾರತ ಮತ್ತು ರಷ್ಯಾ ದೇಶಗಳು ಉತ್ತಮ ಬಾಂಧವ್ಯ ಹೊಂದಿವೆ? ವಿವರಿಸಿ.
29. ಸಂಘಟಿತ ಮತ್ತು ಅಸಂಘಟಿತ ವಲಯದ ದುಡಿಮೆಗಾರರನ್ನು ವ್ಯತ್ಯಯಿಸಿ.
**30.** ಭಾರತದ ಪಶ್ಚಿಮ ಮತ್ತು ಪೂರ್ವ ತೀರದ ಬಂದರುಗಳನ್ನು ಪಟ್ಟಿ ಮಾಡಿರಿ. **ಅಥವಾ**
ಕೈಗಾರಿಕೆಗಳ ಸ್ಥಾನೀಕರಣವನ್ನು ನಿರ್ಧರಿಸುವ ಅಂಶಗಳನ್ನು ತಿಳಿಸಿ.
31. ನೈಸರ್ಗಿಕ ಮತ್ತು ಮಾನವ ಶಕ್ತಿಗಳೆರಡೂ ಭೂಕುಸಿತಕ್ಕೆ ಹೇಗೆ ಕಾರಣವಾಗುತ್ತವೆ , ವಿವರಿಸಿ.
32. ಗ್ರಾಮೀಣಾಭಿವೃದ್ಧಿಯ ಮಹತ್ವವನ್ನು ವಿವರಿಸಿ. **ಅಥವಾ**
ಮಾನವ ಅಭಿವೃದ್ಧಿ ಸೂಚಿಯನ್ನು ಹೇಗೆ ಲೆಕ್ಕಹಾಕಲಾಗುತ್ತದೆ?
33. ಬ್ಯಾಂಕಿನಲ್ಲಿ ಖಾತೆ ತೆರೆಯುವುದರಿಂದಾಗುವ ಉಪಯೋಗಗಳನ್ನು ಪಟ್ಟಿ ಮಾಡಿ. **ಅಥವಾ**
ಉದ್ಯಮಗಾರಿಕೆಯ ಗುಣಲಕ್ಷಣಗಳಾವುವು?

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಉತ್ತರಿಸಿ :** 4×4=16

**34.** 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ವಿಫಲವಾಗಲು ಕಾರಣಗಳನ್ನು ವಿವರಿಸಿ. **ಅಥವಾ**
ಸ್ವಾತಂತ್ರ್ಯ ಚಳುವಳಿಯಲ್ಲಿ ಬಾಲಗಂಗಾಧರ್ ತಿಲಕರ ಪಾತ್ರವನ್ನು ವಿವರಿಸಿ.
35. ಅಸಹಕಾರ ಚಳುವಳಿಯ ಪ್ರಮುಖ ಕಾರ್ಯಕ್ರಮಗಳನ್ನು ವಿವರಿಸಿ.
36. ಕೃಷಿಯ ಪ್ರಾಮುಖ್ಯತೆಯನ್ನು ವಿವರಿಸಿ.
37. ಭಾರತದ ಆಂತರಿಕ ಸಮಸ್ಯೆಯಾಗಿರುವ ಕೋಮುವಾದದ ನಿವಾರಣೆಯ ಕ್ರಮಗಳಾವುವು? ವಿವರಿಸಿ.

**VI. 38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** 1+4=5

ಎ) 23 ½ ಉತ್ತರ ಅಕ್ಷಾಂಶ ಬಿ ) ಮಲಬಾರ್ ತೀರ

ಸಿ) ಭಾಕ್ರನಂಗಲ್ ಯೋಜನೆ ಡಿ) ವಿಶಾಖಪಟ್ಟಣ